

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SK NEWS ಕನ್ನಡ

SIHI KAHI

KANNADA DAILY MORNING

BAGALKOT

Volume : 07 | Issue : 309 | Saturday 23-08-2025 | E-mail : maruti.b.hosamani76@gmail.com | Page: 4 | Price : Rs. 1/-


## ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಗಣೇಶ ಹಬ್ಬ ಹಾಗೂ ಈದ್ ಮೀಲಾದ್ ಹಬ್ಬದ ಶಾಂತಿ ಸಭೆ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ಪೊಲೀಸ್ ಠಾಣೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಡೆದ ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಬ್ಬದ ಪೂರ್ವಭಾವಿ ಶಾಂತಿ ಸಭೆಯಲ್ಲಿ ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಮಾತನಾಡಿ ಪೊಲೀಸರು ಹಾಗೂ ನಾಗರಿಕರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಪೊಲೀಸರು ಸಮವಸ್ತ್ರವನ್ನು ಹಾಕಿಕೊಂಡು ಕರ್ತವ್ಯ ನಿರ್ವಹಿಸಿದರೆ ನಾಗರಿಕರು ಸಮವಸ್ತ್ರ ಇಲ್ಲದೆಯೇ ಕರ್ತವ್ಯ ನಿರ್ವಹಿಸುತ್ತಾರೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಆ. 27 ರಿಂದ ನಡೆಯುವ ಗಣೇಶ ಹಬ್ಬ ಹಾಗೂ ಸೇ 5. ರಂದು ನಡೆಯುವ ಈದ್ ಮಿಲಾದ್ ಹಬ್ಬಗಳನ್ನು ಹಿಂದೂ ಮತ್ತು ಮುಸ್ಲಿಂ ಬಾಂಧವರು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು. ಗಣೇಶ ಹಬ್ಬವನ್ನು ಸುವ್ಯವಸ್ಥಿತವಾಗಿ ನಡೆಯುವುದಕ್ಕಾಗಿ ಪೊಲೀಸ್ ಇಲಾಖೆಯಿಂದ 28 ನಿಯಮಗಳನ್ನು ರೂಪಿಸಲಾಗಿದ್ದು ಅವುಗಳನ್ನು ಎಲ್ಲಾ ಗಣೇಶ ಮಂಡಳಿಯವರು ಕಡ್ಡಾಯವಾಗಿ ಪಾಲಿಸಬೇಕು ಹಾಗೂ ಪ್ರಕೃತಿಗೆ ಪೂರಕವಾಗಿರುವಂತೆ ಗಣೇಶ ಹಬ್ಬವನ್ನು ಆಚರಿಸುವುದಕ್ಕಾಗಿ ಮಣ್ಣಿನ ಗಣೇಶ ಮೂರ್ತಿಗಳನ್ನು ಕೂಡಿಸಿ ಹಾಗೂ ಅಲಂಕಾರಕ್ಕೆ ಪ್ಲಾಸ್ಟಿಕ್ ನಿಂದ ಮಾಡಿದ ಅಲಂಕಾರಿಕ ವಸ್ತುಗಳನ್ನು ಬಳಸಬೇಡಿ. ಗಣೇಶನನ್ನು ಕೂಡಿಸಿದ ನಂತರ ವಿಸರ್ಜನೆ ಯಾಗುವವರೆಗೂ ಭಕ್ತಿ ಭಾವದಿಂದ ಹಬ್ಬವನ್ನು ಆಚರಿಸಬೇಕು. ಜೇಸ್ಕಾ ಇಲಾಖೆಯಿಂದ ಮಾತ್ರ ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯಬೇಕು. ಗಣೇಶ



ಪೆಂಡಲ್ ನಲ್ಲಿ ಬೆಂಕಿ ಆಕಸ್ಮಿಕ ಸಂಭವಿಸಿದಲ್ಲಿ ನಂದಿಸುವುದಕ್ಕೆ ಅಗತ್ಯ ಸಲಕರಣೆಗಳನ್ನು ಸಂಗ್ರಹಿಸಿರ ಬೇಕು. ಮಹಿಳೆಯರಿಗೆ ಪ್ರತ್ಯೇಕವಾದಸಾಲಿನವ್ಯವಸ್ಥೆಮಾಡಿರಬೇಕು, ವಿಸರ್ಜನೆ ಸಮಯದಲ್ಲಿ ಪೊಲೀಸ್ ಇಲಾಖೆ ಗುರುತಿಸಿದ ಮಾರ್ಗದಲ್ಲಿಯೇ ಮೆರವಣಿಗೆ ನಡೆಸಬೇಕು. ಮೆರವಣಿಗೆ ಸಮಯದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪ್ರಮುಖ ಬೀದಿಗಳಲ್ಲಿ ಸಿ.ಸಿ ಕ್ಯಾಮರ ಅಳವಡಿಸಲಾಗುವುದು ಹಾಗೂ ಡ್ರೋನ್ ಕಾಣ್ಗಾವಲು ಹಾಕಲಾಗುವುದು. ಮೆರವಣಿಗೆ ಸಮಯದಲ್ಲಿ ಪ್ರಚೋದನೆಕಾರಿ ಭಿತ್ತಿಪತ್ರಪ್ರದರ್ಶನ,ಮಾರಕಆಯುಧಗಳನ್ನು ಹೊಂದುವುದು, ಡಿ.ಜೆ ಹಾಕುವುದು, ಆಶ್ಲಿಲ ಹಾಡುಗಳನ್ನು ಹಾಕುವುದು, ಅಮಲು ಪದಾರ್ಥಗಳನ್ನುಸೇವಿಸಿ ಮೆರವಣಿಗೆಯಲ್ಲಿ ಆಶ್ಲಿಲವಾಗಿ ಕುಣಿಯುವುದನ್ನು ನಿ?ಷೇದಿಸಲಾಗಿದೆ. ರಾತ್ರಿ 10 ರೊಳಗಾಗಿ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಬೇಕು. ವಿಸರ್ಜನೆ ಸ್ಥಳದಲ್ಲಿ ನುರಿತ ಈಜುಗಾರರ ತಂಡದ ವ್ಯವಸ್ಥೆ ಹಾಗೂ ಕ್ರೇನ್ ವ್ಯವಸ್ಥೆ ಮಾಡಲಾಗುವುದು. ಸೇ 5. ರಂದು ಮುಸ್ಲಿಂ ಸಮುದಾಯದವರು ಈದ್ ಮೀಲಾದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸುವಂತೆ ತಿಳಿಸಿದರು.

ಪಿ.ಐ ಸೋಮಶೇಖರ ಕೆಂಚರೆಡ್ಡಿ ಮಾತನಾಡಿ ಸಾರ್ವಜನಿಕವಾಗಿ ಗಣೇಶ ಮೂರ್ತಿಗಳನ್ನು ಕೂಡಿಸುವವರು ಕಡ್ಡಾಯವಾಗಿ ಅನುಮತಿಯನ್ನು ಪಡೆಯಬೇಕು ಅನುಮತಿ ನೀಡುವುದಕ್ಕಾಗಿ ಕಂದಾಯ ಇಲಾಖೆ, ಜೆಸ್ಕಾಂ, ಪುರಸಭೆ, ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಏಕಗಾವಾಕ್ಷಿ ಪದ್ಧತಿಯನ್ನು ಪೊಲೀಸ್ ಠಾಣೆಯ ಆವರಣದಲ್ಲಿ ವ್ಯವಸ್ಥೆ ಮಾಡಲಾಗುವುದು. ರಾತ್ರಿ 10 ರ ನಂತರ ಧ್ವನಿ ವರ್ಧಕ ಬಳಸವುದನ್ನು ನಿಷೇಧಿಸಲಾಗಿದೆ. ಮೇರವಣಿಗೆಸಂಧರ್ಬದಲ್ಲಿಧಾರ್ಮಿಕಸ್ಥಳ, ಆಸ್ಪತ್ರೆ ಹತ್ತಿರ ಪಟ್ಟಾಕಿ ಸಿಡಿಸುವುದು ಹಾಗೂ ಡಿ.ಜೆ ಬಳಸುವುದನ್ನು ನಿಷೇಧಿಸಲಾಗಿದೆ. ಅದಕ್ಕೆ ಪರ್ಯಾಯವಾಗಿ ಸ್ಥಳೀಯ ಕಲಾವಿದರಿಗೆ ಅವಕಾಶ ಮಾಡಿಕೊಡಿ, ಎಲ್ಲಾ ಗಣೇಶ ಮಂಡಳಿಯವರು ಹಗಲಿನ ಸಮಯದಲ್ಲಿ ಗಣೇಶನ ವಿಸರ್ಜನೆ ಮೆರವಣಿಗೆ ಮಾಡಿದಲ್ಲಿ ಒಳ್ಳೆಯದು. ಮೆರವಣಿಗೆ ಸಮಯದಲ್ಲಿ ನಿಗಧಿತ ರಸ್ತೆಯಲ್ಲಿ ಸಂಚರಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿ ಕೊಡಬೇಕು. ಗಣೇಶ ಮಂಡಳಿಯವರು ತಮ್ಮ ಸ್ವಯಂ ಸೇವಕರಿಗೆ ಪ್ರತ್ಯೇಕವಾದ ಗುರುತಿನ ಚೀಟಿಗಳನ್ನು ಮಾಡಿಕೊಡಿ ಗಣೇಶನನ್ನು ಕೂಡಿಸಿದ

**ಪಟ್ಟಣದ ಪೊಲೀಸ್ ಠಾಣೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಡೆದ ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಬ್ಬದ ಪೂರ್ವಭಾವಿ ಶಾಂತಿ ಸಭೆಯಲ್ಲಿ ರಾಯಚೂರುಜಿಲ್ಲಾಪೊಲೀಸ್ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಮಾತನಾಡಿದರು.**

ವಾಹನವನ್ನು ರಸ್ತೆಯಲ್ಲಿ ಒಂಟಿಯಾಗಿ ಬಿಟ್ಟು ಹೋಗಬಾರದು, ಪರ್ಯಾಯ ಚಾಲಕರನ್ನು ಹೊಂದಿರಬೇಕು ಇಲಾಖೆಯ ನಿಯಮಗಳನ್ನು ಮೀರಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ತಹಸೀಲ್ದಾರ್ ಭೀಮರಾಯ.ಬಿ ರಾಮಸಮುದ್ರ, ಸಿಂಧನೂರು ಗ್ರಾಮೀಣ ಡಿ.ವೈ.ಎಸ್.ಪಿ. ಬಿ.ಎಸ್ ತಳವಾರ್ ಮಾತನಾಡಿದರು.

ಸಭೆಯಲ್ಲಿ ರಾಯಚೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ದೀಪಾ, ಜೆಸ್ಕಾಂ ಇಲಾಖೆಯ ಜೆ.ಇ. ಬಸವಲಿಂಗಪ್ಪ, ಹಿರಿಯ ನ್ಯಾಯಾವಾದಿಗಳಾದ ಎ.ಬಿ ಉಪಳಮಠ, ಗುಮ್ಮಬಸವರಾಜ, ಪುರಸಭೆ ಸದಸ್ಯರಾದ ರಾಜಾ ಮಹೇಂದ್ರ ನಾಯಕ ರೇವಣ ಸಿದ್ದಯ್ಯಸ್ವಾಮಿ, ಬಾಷಸಾಬ್, ಮುಖಂಡರಾದ ಕೆ.ಬಸವಂತಪ್ಪ, ರಾಜಾ ಸುಭಾಷಚಂದ್ರ ನಾಯಕ, ರೆಹಮತ್, ಅದಮ್, ಹನುಮೇಶನಾಯಕ ಸೇರಿದಂತೆ ತಾಲೂಕಿನ ಗಣೇಶ ಮಂಡಳಿಗಳ ಪದಾಧಿಕಾರಿಗಳು, ಪಟ್ಟಣದ ನೂರಾರು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.

**ತಾಲೂಕವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ವಸತಿ ನಿಲಯಕ್ಕೆ ಭೇಟಿ ನೀಡಿದ ಅಧಿಕಾರಿಗಳು ಮೂಲಭೂತ ಸೌಕರ್ಯಗಳ ಪೂರೈಕೆಗೆ ಭರವಸೆ





ಸಿಹಿ ಕಹಿ ಪತ್ರಿಕೆ ವರದಿಗೆ ಬಿಗ್ ಇಂಪ್ಯಾಕ್ಟ್

**ಸಿಹಿ ಕಹಿ ಸುದ್ದಿ,**

**ಮುಶಿಗೇರಿ :** ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಮುಶಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಡಿ.ದೇವರಾಜ ಅರಸು ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳು ಮೂಲ ಸೌಕರ್ಯಗಳ ಸಮಸ್ಯೆಯನ್ನು ಎದುರಿಸುತ್ತಿದ್ದು, ಅಭ್ಯಾಸ ಮಾಡಲು ಸಮಸ್ಯೆ ಆಗುತ್ತಿದೆ. ಎಂದು ಹೇಳುತ್ತಿದ್ದರು ಈ ವಿಷಯವಾಗಿ ನಮ್ಮ ಸಿಹಿ ಕಹಿ ಪತ್ರಿಕೆಯಲ್ಲಿ ವರದಿ ಬಿತ್ತರಿಸಲಾಗಿತ್ತು.

ಈ ವರದಿಗೆ ಎಚ್ಚತ್ತುಕೊಂಡ ಅಧಿಕಾರಿಗಳು ಹಾಗೂ ನಿಲಯದ ಮೇಲ್ವಿಚಾರಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಲಿಖಿತ ಆಧಾರ ತೆಗೆದು-ಕೊಂಡು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ನೀಡುವುದಾಗಿ ಅಧಿಕಾರಿಗಳು ತಿಳಿಸಿದರು ಇವರ ಈ ಕಾರ್ಯಕ್ಕೆ ನಮ್ಮ ಸಿಹಿ ಕಹಿ ಪತ್ರಿಕೆಯ ಪರವಾಗಿ ದನ್ಯವಾದಗಳು ತಿಳಿಸಿದ್ದಾರೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ.ಗದಗ**

## ಶ್ರೀ ವಿಜಯ ಮಹಾಂತೇಶ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಸಂಭ್ರಮದ ತೆರೆ 1.5 ಕಿ ಮೀ ಸಾಗಲು 34-ಗಂಟೆ ದಾಖಲಿಸಿತು

**ಇಳಕಲ್ :** ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶರಣ ಸಂಸ್ಕೃತಿ ಮಹೋತ್ಸವ ಅಂಗವಾಗಿ ಮಂಗಳವಾರ ಮಧ್ಯಾಹ್ನ 3.50ಕ್ಕೆ ಶ್ರೀ ಮಠದಿಂದ ಹೊರಟ ಬಸವಾದಿ ಶರಣರ ತಾಡೋಲೆ ವಚನಗಳ ಕಟ್ಟಿನ ಅಡ್ಡಪಲ್ಲಕ್ಕಿ ಮಹೋತ್ಸವ ಇಳಕಲ್ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಒಂದೂವರೆಕಿಲೋಮೀಟರ್ಅಂತರವನ್ನು 34 ಗಂಟೆ 19 ನಿಮಿಷಕ್ಕೆ ಮರಳಿ ಶ್ರೀಮಠಕ್ಕೆ ಆಗಮಿಸಿ ದಾಖಲೆ ನಿರ್ಮಿಸಿತು. ಅಡ್ಡಪಲ್ಲಕ್ಕಿ ಪೂಜೆಯನ್ನುಒಂದೇಬಾರಿಗೆನಾಲ್ಕುಜನರು ಪೂಜೆ ನಡೆಸಿದರು ಬಹುದೀರ್ಘವಾದ ಸಮಯವನ್ನು ಪಡೆದುಕೊಂಡು ಇತಿಹಾಸ ನಿರ್ಮಿಸಿರುವುದು ಶ್ರೀ ಮಠದ



ದಾಖಲೆಯಾಗಿದೆ. ಈ ಒಂದು ಶರಣ ಸಂಸ್ಕೃತಿಮಹೋತ್ಸವದಕಾರ್ಯಕ್ರಮದಲ್ಲಿ ಪಾಲ್ಗೊಂಡಂತಹ ನಾಡಿನ ಸಮಸ್ತ ಜನತೆಗೆ ಹಲವು ಕಲಾವಿದರಿಗೆ ಶ್ರೀ ವಿಜಯ ಮಹಾಂತೇಶ ತರುಣ ಸಂಘದ ಪದಾಧಿಕಾರಿಗಳಿಗೆ ಅಕ್ಕನ ಬಳಗ ಶರಣ ಬಳಗದವರಿಗೆ ಪೊಲೀಸ ಅಧಿಕಾರಿಗಳಿಗೆ ಮಾಧ್ಯಮದವರಿಗೆ ಶ್ರೀಪೀಠ ಪೀಠಾಧಿಪತಿ ಶ್ರೀಗುರು ಮಹಾಂತ ಸ್ವಾಮಿಗಳು ಕೃತಜ್ಞತೆಗಳನ್ನು ಅರ್ಪಿಸಿದರು.

ನಮ್ಮ ಇಲಕಲ್ ಜಾತ್ರೆಯಲ್ಲಿ ಕಲಾ ಮೇಳಗಳು,

ಭಜನೆ,ಡೊಳ್ಳುಕುಣಿತ,ಕಣಿಮಜಲು,ಕೋಳಿ ಕುಣಿತ, ಹುಲಿಡೊಳ್ಳು, ವೀರಗಾಸೆ,ಕಹಾಳೆ. ಶಿರಬಡಗಿ,ಕಂಕಣವಾಡಿ, ವಡಗೇರಿ, ಮುಗಲೋಳ್ಳಿ,ಹೊಸೂರ,ಸೋಮನಕೊಪ್ಪ, ಕರಡಿಗುಡ್ಡ, ಕಮತಗಿ, ಚಿತ್ರದುಗ-ರ್ ಇನ್ನು ಹಲವಾರು ಊರುಗಳಿಂದ ಕಲಾಮೇಳಗಳು ಆಗಮಿಸಿ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಮೆರಗು ತಂದವು. ಕಂಠಿ ವೃತ್ತದಲ್ಲಿ ಇರುವ ಅನುಭವ ಮಂಟಪದಲ್ಲಿ ಮೂರು ದಿನಗಳ ಕಾಲ ನಿರಂತರ ದಾಸೋಹ ಏರ್ಪಡಿಸಲಾಗಿತ್ತು ಕೊಟ್ಟೂರಿನ ಮಿರ್ಚಿ ಬಜ್ಜಿ, ಬೂಂದಿ,ಜೋಳದ ರೊಟ್ಟಿ, ಅನ್ನ ಸಾಂಬಾರುಸಾವಿರಾರುಭಕ್ತರಿಗೆಸಾಂಗವಾಗಿ ಯಾವುದೇ ಲೋಪವಿಲ್ಲದಂತೆ ದಾಸೋಹ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

**ವರದಿ ಕೆ ಎಚ್ ಸೋಲಾಪೂರ**

## ಜಿ.ಟಿ ದೇವೇಗೌಡ ಎಸ್ಸಿ/ಎಸ್ಟಿ ವಿರೋಧಿ ಹೇಳಿಕೆ ವಿರುದ್ಧ ಎಸ್.ಸಿ/ಎಸ್.ಟಿ ಪ್ರಕರಣ ದಾಖಲಿಸಿ, ರಾಜೀನಾಮೆಗೆ ಕದರವೆ ಯಿಂದ ಆಗ್ರಹ

**ಸಿಹಿ ಕಹಿ ಸುದ್ದಿ,**

**ಬಳ್ಳಾರಿ :** ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಬಳ್ಳಾರಿ ಈಗ ತಮ್ಮಲ್ಲಿ ಮನವಿ ಮಾಡಿ ಕೊಳ್ಳುವುದು ಏನೆಂದರೆ ವಿಧಾನ ಸಭೆಯಲ್ಲಿ ಮುಂಗಾರು ಅಧಿವೇಶನದಲ್ಲಿ ಸಹಕಾರ ಕ್ಷೇತ್ರದಲ್ಲಿ ಎಸ್ಸಿ/ಎಸ್ಟಿಗಳ ಮೀಸಲಾತಿಯನ್ನು ಜಾರಿಗೆ ತರುವ ವಿಷಯದಲ್ಲಿ ತಕರಾರು ತಂದು ದಲಿತ ವಿರೋಧಿ ನೀತಿಯನ್ನು ಅನುಸರಿಸಿದ ಜಿ.ಟಿ ದೇವೆಗೌಡನನ್ನು ಈ ಕೂಡಲೇ ಪಕ್ಷದಿಂದ ವಜಾ ಮಾಡಿ ಈತನ ವಿರುದ್ಧ ಕಾನೂನಿನ ರೀತ್ಯಾ ಕ್ರಮ ಕೈಗೊಳಲು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಶಂಕರ್ ನಂದಿಹಾಳ ಆಗ್ರಹಿಸಿದರು.

ವಿಧಾನ ಸಭೆಯಲ್ಲಿ ನಡೆಯುತ್ತಿರುವ ಮುಂಗಾರು ಅಧಿವೇಶನದಲ್ಲಿ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶ್ರೇಯೋಭಿವೃದ್ಧಿಗೆ ಸಹಕಾರ ಕ್ಷೇತ್ರಗಳಲ್ಲೂ ಸಹ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅಧಿಕಾರವನ್ನು ಪಡೆದುಕೊಂಡು ಸಮ ಸಮಾಜದ ಸಮಾನತೆಗಾಗಿ ಎಲ್ಲರೂ ಸಂವಿಧಾನ ಬದ್ಧವಾಗಿ ಹಕ್ಕನ್ನು ಪಡೆಯುವಂತ ಈ ವಿಷಯವನ್ನು ಮಂಡಿಸಿದ್ದು, ಇದಕ್ಕೆ ವಿರೋಧವಾಗಿ ಎಸ್ಸಿ/ಎಸ್ಟಿ ಸಮುದಾಯದವರು ಬಂದರೆ ಸಹಕಾರ ಕ್ಷೇತ್ರವನ್ನು ಮುಚ್ಚಿಬಿಡ ಬೇಕೆಂದು ದಲಿತರ ಹಕ್ಕುಗಳಿಗೆ ಚ್ಯುತಿ ತಂದಿರುತ್ತಾರೆ. ಹಾಗೂ ಸಂವಿಧಾನದ ಅಡಿಯಲ್ಲಿ ಚುನಾವಣೆಗೆ ಸ್ಪರ್ಧಿಸಿ ಶಾಸಕರಾಗಿ ಶಿಕ್ಷಣ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ಇವರು, ಸಮಾನತೆ ಮತ್ತು ಸೌಹಾರ್ದತೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡ ಬೇಕಾಗಿರುತ್ತದೆ. ಆದರೆ ಜಾತಿ ಜಾತಿ ಮಧ್ಯೆ ವಿಷ ಬೀಜವನ್ನು ಬಿತ್ತುತ್ತಾ, ಅಸ್ಪೃಶ್ಯರನ್ನು ಇನ್ನು ಕೆಳಮಟ್ಟಕ್ಕೆ ತಳ್ಳುವ ದುರುದ್ದೇಶದಿಂದ ದಲಿತರನ್ನು ಸಹಕಾರ ಕ್ಷೇತ್ರಕ್ಕೆ ಅವಕಾಶ ಕೊಡದಂತೆ ಈ ರೀತಿಯಾಗಿ ತಡೆಯೊಡ್ಡಿದ್ದಾರೆ ಎಂದರು.

ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ರವರು ನೀಡಿರುವ ಸಂವಿಧಾನದ ಆಶಯದಂತೆ 7 ನೇ.



ತರಗತಿ ವ್ಯಾಸಂಗ ಮಾಡಿರುವ ಜಿ.ಟಿ ದೇವೆಗೌಡರನ್ನು ಶಾಸಕರಾಗಿ ಶಿಕ್ಷಣ ಮಂತ್ರಿಗಳನ್ನಾಗಿ ಮಾಡಿದ್ದು, ಸಂವಿಧಾನವೇ ಹೊರತು, ಬೇರೆ ಯಾವ ಗ್ರಂಥವೂ ಅಲ್ಲಾ, ಸಂವಿಧಾನದ ಮೂಲ ಉದ್ದೇಶವನ್ನು ಗಾಳಿಗೆ ತೂರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಧಿಕಾರ ವಂಚಿತರಾಗಬೇಕು,

ಸಮಾನತೆ ಸಿಗದಂತಾಗಬೇಕು, ಆರ್ಥಿಕ ಮತ್ತು ಸಾಮಾಜಿಕವಾಗಿ ಮುಂದುವರೆಯ ಬಾರದೆಂಬ ಆಲೋಚನೆಯಿಂದ ಪರಿಶಿಷ್ಟರಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಸಹಕಾರ ಕ್ಷೇತ್ರದಲ್ಲಿ ಅವಕಾಶ ನೀಡಬಾರದೆಂದು ವಿರೋಧಿಸಿರುವ ಅಜ್ಞಾನಿ, ಮಾನಸಿಕ ಅಸ್ವಸ್ಥ, ದಲಿತ ವಿರೋಧಿ, ಜಿ.ಟಿ ದೇವೆಗೌಡ ಅವರ ವಿರುದ್ಧ ಎಸ್ಸಿ/ಎಸ್ಟಿ ಹಕ್ಕುಗಳ ಉಲ್ಲಂಘನೆ ಕಾಯ್ದೆಯಲ್ಲಿ ಕೇಸು ದಾಖಲಿಸಿ ಇವರನ್ನು ಬಂಧಿಸಿ, ಇವರಿಂದ ಶಾಸಕತ್ವದ ರಾಜಿನಾಮೆ ಪಡೆದು ಕೊಳ್ಳಬೇಕು ಎಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆಯ ಮೂಲಕ ಆಗ್ರಹಿಸಿತ್ತೀರುವ ಕೆ.ಶಂಕರ್ ನಂದಿಹಾಳ ಜಿಲ್ಲಾ ಪ್ರಧಾನ ಕಾರ್ಯದರ್ಶಿಯವರು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಗೆ ತಿಳಿಸಿದ್ದಾರೆ.

## ಮಂಗಳೂರ ನಲ್ಲಿ ಉಚಿತ ಆರೋಗ್ಯ ತಪಾಷಣೆ ಶಿಬಿರ

**ಕೊಪ್ಪಳ :** ಜಿಲ್ಲೆಯ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ಮಂಗಳೇಶ್ವರ ಕಲ್ಯಾಣ ಮಂಟಪದಲ್ಲಿ ಇಂದು ಅಗಸ್ತ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಹಾಸ್ಪಿಟಲ್ ಕೊಪ್ಪಳ, ವಿಶ್ವ ಹಿಂದೂ ಪರಿಷತ್ ಕೊಪ್ಪಳ ಜಿಲ್ಲೆ ಏಕಲ್ ವಿದ್ಯಾಲಯ ಮತ್ತು ಗ್ರಾಮ ಪಂಚಾಯತ ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಶಿಬಿರ ದಿಲ್ಲಿ ಭಾಗವಹಿಸಿದ್ದ ಡಾ. ಲೋಕೇಶ ಮಾತನಾಡಿ



ಅಗಸ್ತ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ನುರಿತ ವೈದ್ಯರಿಂದ ಹಾಗೂ ವಿದ್ಯಾರ್ಥಿಗಳಿಂದ ಮಂಗಳೂರು ಗ್ರಾಮದ ಜನರಿಗೆ ಉಚಿತವಾಗಿ ಕಣ್ಣಿನ ಚಿಕಿತ್ಸೆ, ಮೊಣಕಾಲು ನೋವಿನ ಚಿಕಿತ್ಸೆಯನ್ನು ನಮ್ಮ ವೈದ್ಯರು ತಪಾಸಣೆ ಮಾಡಿ ಸರಿಯಾದ ಚಿಕಿತ್ಸೆ ನೀಡಿದರು.

ಕಣ್ಣಿನ ಪೊರೆ ಹಾಗೂ ಅನ್ಯ ಶಸ್ತ್ರ ಚಿಕಿತ್ಸೆಗಳಿಗೆ ಯಶಸ್ವಿನಿ ಕಾರ್ಡ್ ಸೌಲಭ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಸುಧಾಕರ,ಡಾ, ಸಂಗಮೇಶ್ ಹಿರೇಮಠ,ಡಾ. ಎಮ್ ಆರ್ ಕುಲಕರ್ಣಿ,ಡಾ. ಪಾರ್ವತಿ, ಡಾ. ಸೃಜನ, ಡಾ. ಪ್ರಜ್ವಲಾ, ಸೌಂದರ್ಯ ಹೆಚ್ಆರ್, ವಿದ್ಯಾರ್ಥಿಗಳು, ಸಿಬ್ಬಂದಿಯವರು, ಗ್ರಾಮಸ್ಥರು ಹಾಜರಿದ್ದರು.

## ವಾರಣಾಸಿಯನ್ನು ಹಿಪ್ಪರಗಿಯಲ್ಲಿ ನೋಡುತ್ತಿದ್ದೇವೆ: ನಂದದೇವಗಿರಿ ಬಾವಾ | ದೇಶದ ನದಿಗಳ ಉಳಿವು, ಸಂರಕ್ಷಣೆ ಮುಖ್ಯವಾಗಿದೆ: ನಿರಾಣಿ

**ಜಮಖಂಡಿ :** ದೇಶದಲ್ಲಿ ನದಿಗಳ ಉಳಿವಿನ ಜೊತೆಗೆ ಅವುಗಳ ಸಂರಕ್ಷಣೆ ಬಹಳಷ್ಟು ಮುಖ್ಯವಾಗಿದೆ. ನಮ್ಮ ಭಾಗದ ಜೀವನದಿ ಕೃಷ್ಣಾನದಿಯಮಹಿಮೆಅರಿತುಕೊಳ್ಳಬೇಕಾಗಿದೆ ಎಂದು ಎಂ.ಆರ್.ಎನ್. ಸಮೂಹ ಸಂಸ್ಥೆ ನಿರ್ದೇಶಕ ಸಂಗಮೇಶ ನಿರಾಣಿ ಹೇಳಿದರು.

ತಾಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿರುವ ಕೃಷ್ಣಾನದಿ ತೀರದಲ್ಲಿ ಕೃಷ್ಣಾರತಿ, ಕೃಷ್ಣಾ ಪುಣ್ಯ ಸ್ನಾನ, ಕುಂಭಮೇಳ ಶೋಭಾ ಯಾತ್ರೆ, ಲೋಕ ಕಲ್ಯಾಣಕ್ಕೆ ವಿಶೇಷ ಪೂಜೆ ಹೋಮ ಮತ್ತು ಮಾಜಿ ಸಚಿವ ಮುರಗೇಶ ನಿರಾಣಿ ಅವರ ಅರವತ್ತನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುರಗೇಶ ನಿರಾಣಿ ಅವರ ಅರವತ್ತನೇ ವರ್ಷದ ಹುಟ್ಟು ಹಬ್ಬದಂದು ಅರವತ್ತು ಜನ ನಾಗಾಸಾಧುಗಳ ಆಗಮನದಿಂದ ನಮ್ಮ ಈ ನೆಲ ಇನ್ನಷ್ಟು ಪುಣ್ಯ ಕ್ಷೇತ್ರವಾಗಿದೆ. ನಾಗಾ ಸಾಧುಗಳು, ಅಘೋರಿಗಳು, ಸಂತರು, ಸಾಧುಗಳು ಭಾಗವಹಿಸಿದ್ದಾರೆ. ಇಂತಹ ಮಹಾನ್ ಸಾಧು ಸಂತರ ಆಶೀರ್ವಾದ ನಮ್ಮೆಲ್ಲರಿಗೂ ಸದಾಕಾಲ ಲಭಿಸಲಿ. ನಮ್ಮ ನಾಡು ರಕ್ಷಣೆಗಾಗಿ ದುಡಿದ ಮಹನೀಯರನ್ನು ನೆನಪಿಸಿಕೊಳ್ಳಬೇಕು. ನಿಮ್ಮೆಲ್ಲರ ಮುರಗೇಶ ನಿರಾಣಿ ಅವರು ಮುಂದಿನ ನೂರು ವರ್ಷ ಮುಂದಾಲೋಚನೆ ಹೊಂದಿರುವ ದೂರದೃಷ್ಟಿ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ದೂರದೃಷ್ಟಿ ಯೋಚನೆ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಅವರಿಗೆ ಉದ್ಯೋಗ ನೀಡುವುದು, ಅವರೆಲ್ಲರನ್ನು ಪ್ರತಿಷ್ಠಿತ ಉದ್ಯಮಿಗಳಾಗಿ ರೂಪಿಸಿ ದೇಶದ ಪ್ರಗತಿಗೆ ಅಳಿಲು ಸೇವೆ ಮಾಡುವ ಮಹತ್ತರ ಯೋಜನೆ ಕೂಡ ಇದೆ ಎಂದರು.

ಹರಿಹರ ಪೀಠದ ವಚನಾನಂದ ಶ್ರೀಗಳು



ಮಾತನಾಡಿ, ನಾಯಕನಾದವನು ತನ್ನ ಹುಟ್ಟು ಹಬ್ಬವನ್ನು ಸಾವಿರಾರು ಸಾಧು ಸಂತರನ್ನು ಕರೆಸಿ ತಮಗೆ ಮಾತ್ರವಲ್ಲದೆ ಕೃಷ್ಣೆಯ ಭಾಗದ ರೈತರಿಗೂ ನಾಗಾಸಾಧುಗಳ ದರ್ಶನ ಕಲ್ಪಿಸಿದ್ದು ಮಹತ್ತರ ಕೆಲಸವಾಗಿದೆ. ಕೇವಲ ಒಬ್ಬ ಸಣ್ಣ ಕಬ್ಬು ಬೆಳೆಗಾರರಾಗಿದ್ದವರು ಇಂದು ಬೃಹತ್ ಉದ್ಯಮಿಯಾಗಿ ಬೆಳೆದು ಹಲವಾರು ರಂಗದಲ್ಲಿ ಗುರುತಿಸಿಕೊಂಡಿದ್ದಾರೆ. 75 ಸಾವಿರ ಜನರಿಗೆ ಉದ್ಯೋಗ ನೀಡುವ ಮೂಲಕ ಸಾವಿರಾರು ಕುಟುಂಬಗಳ ಆರ್ಥಿಕ ಪ್ರಗತಿಗೆ ಆದ-ಾರವಾಗಿದ್ದಾರೆ. ಪ್ರತಿನಿತ್ಯ ಕಾಶಿಯಲ್ಲಿ ಜರುಗುವ ಗಂಗಾರತಿ ರೀತಿಯಲ್ಲಿ ಕರ್ನಾಟಕದ ಎಲ್ಲ ನದಿಗಳಿಗೆ ಆರತಿಗಳು ಆಗಬೇಕೆಂದು ವೇದಿಕೆಯ ಮೂಲಕ ಸರಕಾರಕ್ಕೆ ಮನವಿ ಮಾಡಿದರು. ಪ.ಪೂ.ಸಿದ್ಧರಾಮೇಶ್ವರ ಶ್ರೀಗಳು ಮಾತನಾಡಿ, ಕೈಗಾರಿಕಾ ಕ್ರಾಂತಿಯ ಹರಿಕಾರ ನಿರಾಣಿಯವರು ತಮ್ಮ ಲಾಭದ ಜೊತೆಗೆ ಸಮಾಜಕ್ಕೆ ಎಷ್ಟು ಲಾಭ ಆಗುತ್ತೆ ಎಂಬುದರ ಬಗ್ಗೆ ವಿಚಾರ ಹೊಂದಿರುವ ವ್ಯಕ್ತಿಯಾಗಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಕೈಗಾರಿಕೆ ಪುನಃ ಸ್ಥಾಪಿಸಿದರು. ಅಂದು ಸಮುದ್ರ ಪಾಲಾಗುತ್ತಿದ್ದ ಕಾಳಿನದಿ ನೀರನ್ನು ಯೋಜನೆ ರೂಪಿಸಿ ನಾಡಿಗೆ ಹರಿಸಿದ ಹರಿಕಾರ. ನೀರನ್ನು ಮತ್ತೆ ರೈತರಿಗೆ ಒದಗಿಸಿ ಆರ್ಥಿಕವಾಗಿ ಸದೃಢಗೊಳಿಸಿದವರು ಎಂದರು.

ಹುಕ್ಕೇರಿಯ ಚಂದ್ರಶೇಖರ ಶ್ರೀಗಳು ಮಾತನಾಡಿ, ನಮ್ಮ ನದಿ, ಸಂಪ್ರದಾಯ, ನೆಲ, ಜಲ, ಸಂಸ್ಕೃತಿಯನ್ನು ಬಿಟ್ಟರೆ ನಮಗೆ ಅನಾಹುತ ಕಟ್ಟಿಟ್ಟ ಬುತ್ತಿ. ನದಿಗಳ ಬಗ್ಗೆ ತಿಳಿಸಿ ಕೊಡಲು ಇಂದು ನಿರಾಣಿ ಕುಟುಂಬ ಕೃಷ್ಣಾ ಪುಣ್ಯ ಸ್ನಾನ ಮಾದರಿಯಾಗಲಿದೆ ಎಂದರು.

ನಾಗಾಸಾಧು ಅಖಾಡ ಮುಖ್ಯಸ್ಥ ನಂದದೇವಗಿರಿ ಬಾಬಾ ಮಾತನಾಡಿ, ವಾರಣಾಸಿಯ ರೀತಿ ಮಿನಿ ಕಾಶಿಯನ್ನು ಇಂದು ಹಿಪ್ಪರಗಿಯಲ್ಲಿ ನೋಡುತ್ತಿದ್ದೇವೆ. ಅಲ್ಲಿ ಗಂಗೆಯ ಇತಿಹಾಸವಿರುವ ಹಾಗೆ ಇಲ್ಲಿ ಕೃಷ್ಣೆಯ ಇತಿಹಾಸ ತಿಳಿಸಿದ್ದು ಪುಣ್ಯವಾಗಿದೆ. ಇಂದು ನಾನು ಸಂಕಲ್ಪ ಮಾಡುತ್ತೇನೆ ಮುಂದಿನ ವರ್ಷ ಸಾವಿರಾರು ಸಾಧುಗಳ ಸಮೂಹ ಹರಿದು ಬಂದು ಕ್ಷೇತ್ರವು ಮತ್ತಷ್ಟು ಪವಿತ್ರಗೊಳ್ಳಲಿದೆ. ಈ ಭಾಗದ ಕೃಷ್ಣೆ ನಿಮ್ಮೆಲ್ಲರ ಜೀವನಾಡಿ. ಇಂದು ಗಂಗೆ ರೀತಿಯಲ್ಲಿ ಕೃಷ್ಣಾರತಿ ಆಗಲಿ. ಇದರಿಂದ ಇತಿಹಾಸ ಸೃಷ್ಟಿಯಾಗಲಿ. ಮುಂದೊಂದು ದಿನ ರೈತರೇ ನಮ್ಮ ದೇವರಾಗುತ್ತಾರೆ. ಅಂತಹ ರೈತರನ್ನು ಬೆಳೆಸುವ, ಉಳಿಸುವ ಕೆಲಸವಾಗಬೇಕು ಎಂದರು.

# ವಿವಾಹದ ಫೋಟೊ, ವಿಡಿಯೊ ಸಮರ್ಪಕ: ದಂಡ ರೂಪದ ಪರಿಹಾರಕ್ಕೆ ಗ್ರಾಹಕರ ಆಯೋಗ ಆದೇಶ



**ಕೊಪ್ಪಳ :** ವಿವಾಹಪೂರ್ವ ಮತ್ತು ವಿವಾಹದ ಫೋಟೊ ಮತ್ತು ವಿಡಿಯೊಗಳನ್ನು ಸಮರ್ಪಕ ರೀತಿಯಲ್ಲಿ ಸಿದ್ಧಪಡಿಸಿ ನೀಡದೆ ನಿರ್ಲಕ್ಷ್ಯವಹಿಸಿ ಸೇವಾ ನ್ಯೂನತೆ ಎಸಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಿದವರಿಗೆ 25 ಸಾವಿರ ಪರಿಹಾರ ಮತ್ತು 5 ಸಾವಿರ ದೂರಿನ ಖರ್ಚನ್ನು ಬಡ್ಡಿ ಸಹಿತ ನೀಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ತೀರ್ಪು ನೀಡಿದ ಅಪರೂಪದ ಪ್ರಕರಣ ಬೆಳಕಿಗೆ ಬಂದಿದೆ.

ಆಗಿದ್ದೇನು: ನಗರದ ನಿವಾಸಿಗಳಾದ ಲೇಖನಾ ಮತ್ತು ಅರ್ಪಣ್ ಎಂಬುವವರ ಮದುವೆ ಸಮಾರಂಭ 2022ರ ನ.28–30ರ ವರೆಗೆ ನಡೆದಿದ್ದು ವಿವಾಹಪೂರ್ವದ ಮತ್ತು ವಿವಾಹದ ಫೋಟೊಗಳು ಹಾಗೂ ವಿಡಿಯೊಗಳನ್ನು ಮಾಡಿಕೊಡುವ ನಿಟ್ಟಿನಲ್ಲಿ ರೋಷನ್ ಕ್ರಿಸ್ಟೋಫರ್ ಮತ್ತು ಇಮ್ಯಾನುಲ್ ಎಂಬುವವರಿಗೆ ಸೇರಿದ ಬೆಂಗಳೂರಿನ ವೆಡ್‌ಹುಡ್ಸ್ ವೂವ್‌ಲೆಕ್ಸ್ ಸಂಸ್ಥೆಯೊಂದಿಗೆ ಒಟ್ಟು1.20ಲಕ್ಷಮೊತ್ತಪಾವತಿಸುವ ಕುರಿತು ಒಪ್ಪಂದವಾಗಿತ್ತು.

ಅದರ ಪ್ರಕಾರ ದೂರುದಾರರು ಹಂತ ಹಂತವಾಗಿ ಫೋನ್‌ಪೇ ಮೂಲಕ ಒಟ್ಟು 1 ಲಕ್ಷ ಹಣ ಎದುರುದಾರರ ಖಾತೆಗೆ ಜಮೆ ಮಾಡಿದ್ದರು.

ಒಪ್ಪಂದದ ಪ್ರಕಾರ ಚಿಕ್ಕಮಗಳೂರು ಹಾಗೂ ಸಕಲೇಶಪುರದಲ್ಲಿ ಮೂರು ದಿನಗಳ ಅವಧಿಯಲ್ಲಿ ಫೋಟೊ ವಿಡಿಯೊ ತೆಗೆದುಕೊಡಬೇಕಿತ್ತು. ಆದರೆ ಒಪ್ಪಂದದ ಪ್ರಕಾರ ಸಂಬಂಧಿಸಿದ ಎದುರುದಾರರು ಸಮರ್ಪಕ ರೀತಿಯಲ್ಲಿ ಫೋಟೊ ವಿಡಿಯೊಗಳನ್ನು ಮಾಡಿಕೊಡದೆ ನಿರ್ಲಕ್ಷ್ಯತೆ ತೋರುವ ಮೂಲಕ ಸೇವಾ ನ್ಯೂನತೆ ಎಸಗಿದ್ದಾರೆ ಎಂದು ದೂರುದಾರರಾದ ಲೇಖನಾ ಮತ್ತು ಅರ್ಪಣ್ ಅವರು ಕೊಪ್ಪಳದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಪರಿಹಾರ ಕೋರಿ ದೂರು ದಾಖಲಿಸಿದ್ದರು.

ಈ ಕುರಿತು ಆಯೋಗವು ಎದುರುದಾರರಿಗೆ ನೋಟಿಸನ್ನು ಖುದ್ದಾಗಿ ಜಾರಿ ಮಾಡಿತ್ತು. ನಂತರ ಎದುರುದಾರರು ತಮ್ಮ ವಕೀಲರ ಮೂಲಕ ಆಕ್ಷೇಪಣೆ ಮತ್ತು ವಿಚಾರಣೆಗೆ ಸಂಬಂಧಿಸಿದ ಪ್ರಮಾಣಪತ್ರಸಲ್ಲಿಸಿದ್ದರು.ದೂರಿಗೆ ಸಂಬಂಧಿಸಿದಂತೆ ಆಯೋಗದ ಅಧ್ಯಕ್ಷೆ ಜಿ.ಇ.ಸೌಭಾಗ್ಯಲಕ್ಷ್ಮಿ, ಸದಸ್ಯರಾದ ರಾಜು.ಎನ್.ಮೇತ್ರಿ ಅವರು ದಾಖಲೆ ಪರಿಶೀಲಿಸಿ ಮತ್ತು ವಾದ ಆಲಿಸಿದ್ದರು.

ಅಲ್ಲದೆ ಫೋಟೊ ಮತ್ತು ವಿಡಿಯೊಗಳನ್ನು ನೀಡುವಲ್ಲಿ ವಿಳಂಬ ಹಾಗೂ ಅವುಗಳನ್ನು ಸಮರ್ಪಕ ರೀತಿಯಲ್ಲಿ ಸೂಕ್ತ ಸಮಯದಲ್ಲಿ ಒದಗಿಸುವಲ್ಲಿ ಎದುರುದಾರರು ವಿಫಲರಾಗಿ ಸೇವೆಯಲ್ಲಿ ನ್ಯೂನತೆ ಎಸಗಿದ್ದಾರೆ ಎಂಬುದನ್ನು ಆಯೋಗ ನಿರ್ಧರಿಸಿತ್ತು.

ಈ ಕಾರಣಕ್ಕೆ ಎದುರುದಾರರು ದೂರುದಾರರಿಗೆ ಪರಿಹಾರ ರೂಪದಲ್ಲಿ 25,000 ಹಣವನ್ನು ವಾರ್ಷಿಕ ಶೇ 6ರ ಬಡ್ಡಿ ದರದೊಂದಿಗೆ ದೂರು ನೀಡಿದ ದಿನಾಂಕದಿಂದ ಪರಿಹಾರ ಮೊತ್ತ ಪಾವತಿಯಾಗುವವರೆಗೆ ನೀಡಬೇಕು.

ಅದೇ ರೀತಿ 5,000 ದೂರಿಗೆ ಸಂಬಂಧಿಸಿದ ಖರ್ಚಿನ ಮೊತ್ತವನ್ನು ಪಾವತಿಸುವಂತೆ ಆದೇಶಿಸಿದೆ.

ಈ ಪರಿಹಾರದ ಮೊತ್ತವನ್ನು ಆದೇಶ ಪ್ರಕಟವಾದ ದಿನಾಂಕದಿಂದ 45 ದಿನಗಳ ಒಳಗಾಗಿ ಎದುರುದಾರರು ಫಿರ್ಯಾದುದಾರರಿಗೆ ಪಾವತಿಸುವಂತೆ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆಎಂದುಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿ ಪ್ರಕಟಣೆ ತಿಳಿಸಿದೆ.

# ಕರಾಟೆ ಕ್ರೀಡಾಕೂಟ: ಕಾಟ ವಿಭಾಗದಲ್ಲಿ 11 ಟ್ರೋಫಿ ಹಾಗೂ ಕುಮಿತೆ ವಿಭಾಗದಲ್ಲಿ 4 ಮೆಡಲ್




**ಬಾಗಲಕೋಟ:**ಜಿಲ್ಲೆಯನವನಗರದಪ್ರತಿಷ್ಠಿತತೇಜಸ್ ಅಂತರರಾಷ್ಟ್ರೀಯ ವಸತಿ ಶಾಲೆಯ ಮಕ್ಕಳು, ಇತ್ತಿಚೆಗೆ ಶಿವಮೊಗ್ಗದಲ್ಲಿ ನಡೆದ ಮೂರನೆಯ ಆವೃತ್ತಿಯ ಅಂತಾರಾಷ್ಟ್ರೀಯ ಕರಾಟೆ ಕ್ರೀಡಾಕೂಟದಲ್ಲಿ ಬಾಗವಹಿಸಿ ಕಾಟ ವಿಭಾಗದಲ್ಲಿ ಹನ್ನೊಂದು ಟ್ರೋಫಿ ಹಾಗೂ ಕುಮಿತೆ ವಿಭಾಗದಲ್ಲಿ ನಾಲ್ಕು ಮೆಡಲ್ ಗಳಿಸಿದ್ದಾರೆ ಹಾಗೆ ಆರನೆಯ ಆವೃತ್ತಿಯ ಅಂತಾರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸಿ ಕಾಟ ವಿಭಾಗದಲ್ಲಿ ಹನ್ನೆರಡು ಮೆಡಲ್ ಹಾಗೆ ಕುಮಿಟೆ ವಿಭಾಗದಲ್ಲಿ ನಾಲ್ಕು ಟ್ರೋಫಿ ಗಳಿಸಿ ತಮ್ಮ ಕೌಶಲ್ಯ ಮೆರೆದಿದ್ದಾರೆ, ಈ ಎರಡೂ ಅಂತಾರಾಷ್ಟ್ರೀಯ ಕರಾಟೆ ಕ್ರೀಡಾಕೂಟದಲ್ಲಿ ಅಮೆ–ರಿಕ, ನೇಪಾಳ, ಶ್ರೀಲಂಕಾ, ಭೂತಾನ್ ರಾಷ್ಟ್ರಗಳಿಂದ ಅಲ್ಲದೆ ದೇಶದ ವಿವಿಧ ರಾಜ್ಯಗಳಿಂದ ಹಾಗೆ ರಾಜ್ಯದ ಹಲವಾರು ಜಿಲ್ಲೆಗಳಿಂದ ಬಂದಂತಹ ಸುಮಾರು ಎರಡು ಸಾವಿರ ಕರಾಟೆ ಪಟುಗಳು ಭಾಗವಹಿಸಿದ್ದರು.

ಶಾಲೆಯ ಕರಾಟೆಯ ಕೋಚ್ ಶ್ರೀ ರಜಪೂತ್ ಉತ್ತಮ ತರಬೇತಿ ಪರಿಶ್ರಮ ಶಿಸ್ತು ಯಶಸ್ಸು ಬರಲು ಕಾರಣ ಹಾಗೆ ಮಕ್ಕಳಿಗೆ ಜೀವನದಲ್ಲಿ ಇಂತಹ ಸಂದರ್ಭದಲ್ಲಿ ಕಲಿಯಲುಕೂಡಾಬಹಳವಿರುತ್ತದೆಎಂದುಹೇಳಿದರು. ಹಾಗೂ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಚಿನ್ ಬತ್ರರವರು ಕರಾಟೆ ಪಟುಗಳಿಗೆ ಉತ್ತಮವಾಗಿ ಸ್ಪರ್ಧಿಸಿ ಶಾಲೆಗೆ, ರಾಜ್ಯಕ್ಕೆ, ಹೆಮ್ಮೆ ತಂದಿದ್ದೀರಿ ಎಂದು ಹರಸಿದರು.

ಅಧ್ಯಕ್ಷರಾದ ಮಾಧುರಿ ಮುಧೋಳ್ ಅವರು ಕರಾಟೆ ಮನುಷ್ಯನನ್ನು ದೇಶದ ಉತ್ತಮ ನಾಗರಿಕನನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿ ಶುಭಕೋರಿದರು.

# ಪಿಕೆಪಿಎಸ್ ಕಟ್ಟಡ ಕಾಮಗಾರಿಗೆ ಶಾಸಕ ಡಾ. ವಿಜಯಾನಂದ ಕಾಶಪ್ಪನವರ್ ಭೂಮಿ ಪೂಜೆ



**ಇಲಕಲ್ :** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಕೊಪ್ಪ ಎಸ್‌ಎಮ್ ನೂತನ ಕಟ್ಟಡ ಭೂಮಿ ಪೂಜೆ ನೆರವೇರಿಸಿದ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ, ಹುನಗುಂದ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯಶ್ರೀ ಡಾ. ವಿಜಯಾನಂದ ಎಸ್ ಕಾಶಪ್ಪನವರ್, ಮತ್ತು ಶ್ರೀ ಷ ಬ್ರ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಭೂಮಿ ಪೂಜೆಯನ್ನು ನೆರವೇ–ರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಶ್ರೀ ಮಹೆಬೂಬ್ ಮಲಿಕಸಾಬ್ ಡೋಣೂರ, ಶ್ರೀಮತಿ ಲಕ್ಷ್ಮೀ ಚಂಡಿ ಉಪಾಧ್ಯಕ್ಷರು ಸಂಘದ ಸದಸ್ಯರಾದ ಶ್ರೀ ಮಹಬೂಬ ಡೋಣೂರ, ಶ್ರೀ ಯಮನಪ್ಪ ಅಂಗೇರ, ಶ್ರೀ ಶೇಖರಗೌಡ ಪಾಟೀಲ್, ಶ್ರೀಮತಿ ಸೈರಾಬಾನು ಹೊರಪ್ಯಾಟಿ, ಶ್ರೀ ಮಹಮ್ಮದರಫೀಕ್ ಡೊಣೂರ, ಶ್ರೀ ಮಹಾಂತಯ್ಯ ನಂದಿಹಾಳಮಠ, ಶ್ರೀ ಚಂದ್ರಶೇಖರ ಸುಂಕದ ಮುಖ್ಯಕಾರ್ಯನಿರ್ವಾಹಕರು, ಶ್ರೀ ಯಂಕಪ್ಪ ವಡ್ಡರ, ಶ್ರೀ ಹನಮಂತ ಹುಡೇದಗಡ್ಡಿ, ಶ್ರೀ ಮಲ್ಲನಗೌಡ ಗೌಡರ, ಶ್ರೀ ಪವಾಡೆಪ್ಪ ಕೆಂಗಲ್ಲ, ಶ್ರೀ ಮಲಿಕಸಾಬ ವಾಲಿಕಾರ ಮತ್ತಿತರರು ಉಪಸ್ಥಿತ–ರಿದ್ದರು.

# ವಿಷ್ಣು ಅಭಿಮಾನಿಗಳಿಂದ ಸರ್ಕಾರಕ್ಕೆ ಪತ್ರ



**ಕುಷ್ಟಗಿ :** ಬೆಂಗಳೂರಿನ ಅಭಿಮಾನ್ ಸ್ಟುಡಿಯೊದಲ್ಲಿಯೇ ಚಲನಚಿತ್ರ ನಟ ಡಾ.ವಿಷ್ಣುವರ್ಧನ್ ಅವರ ಸಮಾಧಿಯನ್ನು ಪುನರ್ ನಿರ್ಮಿಸುವಂತೆ ಒತ್ತಾಯಿಸಿ ಪಟ್ಟಣದಲ್ಲಿನ ಡಾ.ವಿಷ್ಣು ಸೇನಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ರಾಜ್ಯಪಾಲರಿಗೆ ಬರೆದ ಮನವಿಯನ್ನು ಗುರುವಾರ ತಹಶೀಲ್ದಾರ್ ಅಶೋಕ ಶಿಗ್ಗಾವಿ ಅವರಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿ ಪ್ರಮುಖ ವೀರೇಶ ಬಂಗಾರಶೆಟ್ಟರ ಇತರರು, ವಿಷ್ಣುವರ್ಧನ ಅವರ ಸಮಾಧಿ ತೆರವುಗೊಳಿಸಿದ್ದನ್ನು ಖಂಡಿಸಿದರು. 'ಈ ಘಟನೆ ವಿಷ್ಣುವರ್ಧನ ಅವರ ಅಭಿಮಾನಿಗಳಿಗೆ ಬಹಳಷ್ಟು ನೋವು ಉಂಟು ಮಾಡಿದೆ.

ಚಲನಚಿತ್ರ ಚಿತ್ರೀಕರಣಕ್ಕೆಂದು ಲೀಸ್ ಆಧಾರದ ಮೇಲೆ ರಾಜ್ಯ ಸರ್ಕಾರ ನೀಡಿದ 20 ಎಕರೆ ಜಮೀನನ್ನು ಕೆಲವರು ದುರ್ಬಳಕೆ ಮಾಡಿಕೊಂಡಿರುವುದು ಅಕ್ಷಮ್ಯ ಅಪರಾಧವಾಗಿದೆ' ಎಂದರು.

'ಗಂಭೀರ ಪ್ರಕರಣ ಇದಾಗಿದೆ. ಸಮಾಧಿ ತೆರವು ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿದೆ. ಹೀಗಿದ್ದರೂ ರಾಜ್ಯ ಸರ್ಕಾರ ಮೌನ ವಹಿಸಿರುವುದು ಅಚ್ಚರಿ ತಂದಿದೆ. ಸರ್ಕಾರ ತಕ್ಷಣ ಈ ವಿಷಯದಲ್ಲಿ ಮಧ್ಯಪ್ರವೇಶಿಸಿಸೂಕ್ತದಾಖಲೆಗಳಮೂಲಕ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ಭೂಮಿಯನ್ನು ಮತ್ತೆ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು' ಎಂದಿದ್ದಾರೆ

ಈ ಸಂದರ್ಭದಲ್ಲಿ ಬಸವರಾಜ ಪಾಟೀಲ, ಚಿನ್ನಪ್ಪ ನಾಗರಾಳ, ಶಿವರುದ್ರಯ್ಯ ನವಲಿಹಿರೇಮಠ, ಬಸವರಾಜ ಗಾಣಿಗೇರ, ಶಿವರಾಜ ಮಸ್ಕಿ, ರಿಯಾಜ್ ಪಟೇಲ, ಬಸವರಾಜ ಹಡಪದ, ರಾಮಣ್ಣ ಕೋರಿ, ಪ್ರಭಂಜನ ಅಗ್ನಿಹೋತ್ರಿ, ಎಸ್. ಎಸ್.ಹಿರೇಮಠ, ಶಾಂತರಾಜ ಗೋಗಿ ಸೇರಿ ವಿಷ್ಣು ಸೇನಾ ಸಮಿತಿ ಸದಸ್ಯರು, ಸಾರ್ವಜನಿಕರು ಹಾಜರಿದ್ದರು.

# ಮುಚಖಂಡಿ ಉದ್ಯಾನವನ ಲೋಕಾರ್ಪಣೆಗೊಳಿಸಿದ ಸಚಿವ ತಿಮ್ಮಾಪೂರ



**ಬಾಗಲಕೋಟೆ :** ಐತಿಹಾಸಿಕ ಮುಚಖಂಡಿ ಕೆರೆಯ ಮುಂಬಾಗದಲ್ಲಿಅಂದಾಜು 5.80 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ಉದ್ಯಾನವನವನ್ನು ಅಬಕಾರಿ ಹಾಗೂ ಜಿಲ್ಲಾಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಶುಕ್ರವಾರ ಉದ್ಘಾಟಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದಕೆರೆಅಭಿವೃದ್ಧಿ ಶುಲ್ಕದಲ್ಲಿನಿರ್ಮಿಸಲಾದಮುಚಖಂಡಿಉ–ದ್ಯಾನವನವನ್ನು ಉದ್ಘಾಟಿಸಿ ಮಾತನಾಡಿದಅವರುಅಭಿವೃದ್ಧಿ ಕೆಲಸ ಬಂದಾಗ ಪಕ್ಷಬೇದ ಮಾಡದೇಜನರ ಪರವಾಗಿ ಕೆಲಸ ಮಾಡಲಾಗುತ್ತದೆ.ಈ ಉದ್ಯಾನವನವನ್ನುಇನ್ನಷ್ಟುಅಭಿವೃದಿ ಪಡಿಸಲುಅನುದಾನ ಬಿಡುಗಡೆಗೆಕ್ರಮವಹಿಸಲಾಗುವುದು.ಈ ಭಾಗಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಾಗಬೇಕು–ಎಂದರು.

ಕಾರ್ಯಕ್ರಮದಅಧ್ಯಕ್ಷತೆ ವಹಿಸಿದ್ದ ಬಾಗಲಕೋಟೆ ಶಾಸಕ ಹಾಗೂ ಬಾಗಲಕೋಟೆ ಪಟ್ಟಣಅಭಿವೃದ್ಧಿ ಪ್ರಾಧಿಕಾರದಅಧ್ಯಕ್ಷಎಚ್.ವಾಯ್.ಮೇಟಿ ಮಾತನಾಡಿಆಲಮಟ್ಟಿಯಲ್ಲಿನಿರ್ಮಿಸಲಾದ ಸಂಗೀತಕಾರಂಜಿ ಮಾದರಿಯಲ್ಲಿ ಮುಖಚಂಡಿಉದ್ಯಾನವನದಲ್ಲಿ ವ್ಯವಸ್ಥೆ ಮಾಡಬೇಕು.ಈ ಕ್ಷೇತ್ರ ಪ್ರವಾಸಿ ತಾಣವಾಗಿ ಬೆಳೆಯಲು ಎಲ್ಲರೀತಿಯ ಕ್ರಮಕೈಗೊಳ್ಳಲು ತಿಳಿಸಿದರು.ವಾರದಲ್ಲಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸುವ ಕೆಲಸವಾಗಬೇಕು ಎಂದರು.

ನಗರಸಭೆ ಪೌರಾಯುಕ್ತರು ಹಾಗೂ ಬುಡಾದಆಯುಕ್ತರಾದ ವಾಸಣ್ಣಆರ್. ಮಾತನಾಡಿಉದ್ಯಾನವನದಲ್ಲಿಕುಡಿಯುವ ನೀರು, ಶೌಚಾಲಯ ಸೇರಿದಂತೆಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.ನೀರಿನ ಕಾರಂಜಿ, ವಿಶ್ರಾಂತಿತಂಗುದಾಣ, ಬಯಲುರಂಗ ಮಂದಿರ, ಮಕ್ಕಳ ಆಟಿಕೆಗಳು ಹಾಗೂ ಪ್ರೇಕ್ಷಕರ ಗ್ಯಾಲರಿಗಳನ್ನು ಮಾಡಲಾಗಿದೆ. ಮುಂದಿನ ವಾರದಿಂದ ಸಾರ್ವಜನಿಕರಿಗೆ ಪ್ರವೇಶಕಲ್ಪಿಸಲಾಗುತ್ತಿದೆಎಂದು ಹೇಳಿದರು.

**ಜಿಲ್ಲೆಯಲ್ಲಿಅರಣ್ಯೀಕರಣ ಮಾಡುವ ಉದ್ದೇಶದಿಂದಜಿಲ್ಲೆಯಲ್ಲಿರುವ ಪ್ರತಿ ಸಕ್ಕರೆ ಕಾರ್ಖಾನೆಗಳಿಂದ ತಲಾ 10 ಸಾವಿರ ಗಿಡಗಳನ್ನು ನೆಡುವಕಾರ್ಯಕ್ಕೆ ಜಿಲ್ಲಾಡಳಿತ ಮುಂದಾಗಿದೆ. ಹವಾಮಾನದವೈಪರಿತ್ಯಗಳನ್ನು ನಾವು ಕಾಣುತ್ತಿದ್ದೇವೆ. ಗಿಡಮರಗಳನ್ನು ಹೆಚ್ಚಿಗೆ ನೆಡುವ ಮೂಲಕ ಅರಣ್ಯೀಕರಣ–ಕ್ಕೆ ವಿಶೇಷ ಒತ್ತುಕೊಟ್ಟುಆಸಕ್ತಿಯಿಂದ ಕೆಲಸ ನಿರ್ವಹಿಸಲು ತಿಳಿಸಿದ ಅವರು ಮುಂದಿನ ಪೀಳಿಗೆಗೆ ಫಲವತ್ತಾದ ಭೂಮಿ, ನೀರುಒದಗಿಸುವಕಾರ್ಯವಾಗಬೇಕು–ಎಂದುಅಬಕಾರಿ ಹಾಗೂ ಜಿಲ್ಲಾಉಸ್ತುವಾರಿ ಸಚಿವಆರ್.ಬಿ.ತಿಮ್ಮಾಪೂರ ತಿಳಿಸಿದರು.**

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ನಗರಸಭೆಅಧ್ಯಕ್ಷೆ ಸವಿತಾ ಲೆಂಕನ್ನವರ, ಮುಚಖಂಡಿಗ್ರಾಮ ಪಂಚಾಯತಅಧ್ಯಕ್ಷರಂಗಪ್ಪ ಪೂಜಾರಿ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಜಿ.ಪಂ ಸಿಇಓ ಶಶಿಧರ ಕುರೇರ, ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಸೇರಿದಂತೆಇತರರು ಉಪಸ್ಥಿತರಿದ್ದರು.

# ಚಿಮ್ಮಡದಲ್ಲಿ ಅಲ್ಲಲ್ಲಿ ಜರುಗಿದ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ



**ಚಿಮ್ಮಡ :** ಗ್ರಾಮದಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಡಗರ ಸಂಭ್ರಮದೊಂದಿಗೆ ಅದ್ದೂರಿಯಿಂದ ಆಚರಿಸಲಾಯಿತು.

ಗ್ರಾಮದ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಕವಾಯತು,ಪ್ರಭಾತ್ ಫೇರಿ,ಸೈನಿಕರಹಾಗೂಸಾಧಕರ ಸನ್ಮಾನ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಿತು.

ಸ್ಥಳಿಯ ಗ್ರಾಮ ಪಂಚಾಯತಿ ಆವರಣದಲ್ಲಿ ನಡೆದ ಧ್ವಜಾರೋಹಣವನ್ನು ಗ್ರಾಮ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಬಂಗಾರೆವ್ವ ಜಾಲಿಕಟ್ಟಿ ನೆರವೇರಿಸಿದರು. ಉಪಾಧ್ಯಕ್ಷೆ ಶ್ರೀಮತಿ ಪದ್ಮಾವತಿ ಬಜಂತ್ರಿ, ಮಾಜಿ ಅಧ್ಯಕ್ಷರಾದಗುರಲಿಂಗಪ್ಪಾಪೂಜಾರಿ,ಪ್ರಭುನೇಸೂರ, ಆನಂದ ಕವಟಗೊಪ್ಪ, ಪ್ರಕಾಶ ಪಾಟೀಲ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಅಶೋಕ ಮೋಟಗಿ, ಮಹಾಲಿಂಗ ಮಾಯಣ್ಣವರ, ಮನೋಜ ಹಟ್ಟಿ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಪ್ರಮುಖರು ಆಗಮಿಸಿದ್ದರು.

ಪ್ರಾಥಮಿಕಕೃಷಿಪತ್ತಿನಸಹಕಾರಿಬ್ಯಾಂಕ್ನಆವರಣದಲ್ಲಿ ನಡೆದ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಚನ್ನಪ್ಪ ಬಿಳ್ಳೂರ ನೆರವೇರಿಸಿದರು.

ಉಪಾಧ್ಯಕ್ಷ ಪ್ರಭು ಗೋವಿಂದಗೋಳ, ಮಾಜಿ ಅಧ್ಯಕ್ಷರಾದ ಶಂಕರ ಬಟಕುರ್ಕಿ, ಹಣಮಂತ ನೇಸೂರ ನಿರ್ದೇಶಕರಾದ ನಿಂಗಣ್ಣ ಪೂಜಾರಿ, ರಾಮಪ್ಪ ಜಗದಾಳ ಸೇರಿದಂತೆ ಹಲವಾರು ಜನ ರೈತ ಪ್ರಮುಖರು ಆಗಮಿಸಿದ್ದರು.

ಸರಕಾರಿ ಪ್ರೌಢ ಶಾಲೆಯಲ್ಲಿ ನಡೆದ ಧ್ವಜಾರೋಹಣವನ್ನು ಮುಖ್ಯೋಪಾದ್ಯಾಯನಿ ಎಂ.ಎಸ್. ಜಿಟ್ಟಿ ನಡೆಸಿದರು. ಎಸ್ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ಹಾಜರಿದ್ದರು. ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಭಾರ ಪ್ರಾಚಾರ್ಯೆ ಸವಿತಾ ರಾಠೋಡ ಧ್ವಜಾರೋಹಣ ನಡೆಸಿದರು. ಸಮಿತಿಯ ಅಧ್ಯಕ್ಷ ಬಸವರಾಜ ಕುಂಚನೂರ, ಪರಪ್ಪಾ ಪಾಲಭಾವಿ, ಉಪನ್ಯಾಸಕ ಎಚ್. ಎಂ. ಕುಂಬಾರ ಇದ್ದರು. ಪಿ. ಪಿ. ಮಾಳಿಗಡ್ಡಿ ಮಠದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ಧ್ವಜಾರೋಹಣವನ್ನು ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ ನೆರವೇರಿಸಿದರು. ಬಾಳಪ್ಪಾ ಹಳಿಂಗಳಿ, ಪುಂಡಲಿಕಪ್ಪಾ ಪೂಜಾರಿ, ರಾಮಪ್ಪ ಬಗನಾಳ, ರಾಚಯ್ಯ ಮಠಪತಿ, ಈಶ್ವರ ಬಡಿಗೇರ, ಗುರಪ್ಪ ಬಳಗಾರ ಉಪಸ್ಥಿತರಿದ್ದರು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಅಡಿವೆಪ್ಪ ಪರೀಟ, ಸರಕಾರಿ ಹೆಣ್ಣು ಮಕ್ಕಳ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಪ್ರಭು ದೇವಗೋಳ, ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಜಾಫರ ಜಮಖಂಡಿ ನೆರವೇರಿಸಿದರು. ಗ್ರಾಮ ಚಾವಡಿಯಲ್ಲಿ ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ನೀಲನ್ನವರ ನೆರವೇರಿಸಿದರು.

ಓಂ. ಪ್ರಭುಲಿಂಗ ಆಯ್.ಟಿ.ಆಯ್. ಕಾಲೇಜು, ಭೂಮಿಕಾ ಸಮೂಹ ಸಂಸ್ಥೆಯ ಪ್ರೌಢ ಶಾಲೆ, ಪ್ರಾಥ–ಮಿಕ ಆರೋಗ್ಯ ಕೇಂದ್ರ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ, ಶ್ರೀ ಬನಶಂಕರಿ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ, ಪಶು ಚಿಕಿತ್ಸಾಲಯ, ಪ್ರಭುಲಿಂಗೇಶ್ವರ ಸಹಕಾರಿ ಬ್ಯಾಂಕ, ವಿಶ್ವಭಾರತಿ ಪ್ರಾಥಮಿಕ ಶಾಲೆ, ಗುರುಪ್ರಿಯಾ ವಿವಿಧೋದ್ದೇಶಗಳ ಸೌಹಾರ್ದ ಬ್ಯಾಂಕ, ಗಜಾನನ ನೇಕಾರರ ಸಹಕಾರಿ ಸಂಘ, ಗರೀಬಿ ಹಟಾವೋ ಸಹಕಾರಿ ಸಂಘ, ಬಸವೇಶ್ವರ ಯುವಕ ಸಂಘ, ನವಜ್ಯೋತಿ ವಿವಿಧೋದ್ದೇಶಗಳ ಸೌಹಾರ್ದ ಬ್ಯಾಂಕ, ಸದ್ಗುರುನಾಥ ಸಹಕಾರಿ ಬ್ಯಾಂಕ, ಸಮೃದ್ಧಿ ಪತ್ತಿನ ಸಹಕಾರಿ ಸಂಘ, ಮಾತ್ರಭೂಮಿ ಪತ್ತಿನ ಸಹಕಾರಿ ಸಂಘ ಸೇರಿದಂತೆ ಇನ್ನೂ ಹಲವಾರು ಸಂಘ ಸಂಸ್ಥೆ, ವಿದ್ಯಾಕೇಂದ್ರಗಳಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹಲವಾರು ಜನ ಪ್ರಮುಖರು ದೇಶಪ್ರೇಮಿಗಳು ಭಾಗವಹಿಸಿದ್ದರು.



**ರಬಕವಿ– ಬನಹಟ್ಟಿ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭಾರತ ಮಾತೆ, ಮಹಾತ್ಮಾ ಗಾಂಧೀಜಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಶಾಸಕ ಸಿದ್ದು ಸವದಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀಶೈಲ ಬೀಳಗಿ, ಆನಂದ ಕಂಪು, ಚಿದಾನಂದ ಹೊರಟ್ಟಿ, ಈಶ್ವರ ಬಿರಾದಾರ ಪಾಟೀಲ, ಭೀಮಶಿ ಪಾಟೀಲ, ಸುವರ್ಣಾ ಕೊಪ್ಪದ, ಗೌರಿ ಮಿಳ್ಳಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.**

# ಅಕ್ಕ, ಅಸ್ಮಿತ್ ಬ್ರ್ಯಾಂಡ್ ಹೆಸರಿನಲ್ಲಿ ಉತ್ಪನ್ನಗಳ ಮಾರಾಟ ಸಹೋದರಿ ಸಂಜೀವಿನಿ ಸೂಪರ್ ಮಾರ್ಕೆಟ್ ಉದ್ಘಾಟನೆ




**ಬಾಗಲಕೋಟೆ :** ನವನಗರದತಾಲೂಕಾ ಪಂಚಾಂುತ ಆವರಣದಲ್ಲಿ ಪ್ರಾರಂಭಿಸಲಾದ ಸಹೋದರಿ ಸಂಜೀವಿನಿ ಸೂಪರ್ ಮಾರ್ಕೆಟ್‌ಗೆಅಬಕಾರಿ ಹಾಗೂ ಜಿಲ್ಲಾಉಸ್ತುವಾರಿ ಸಚಿವಆರ್.ಬಿ.ತಿಮ್ಮಾಪೂರ ಚಾಲನೆ ನೀಡಿದರು.

ಜಿಲ್ಲಾ ಪಂಚಾಯತಎನ್.ಆರ್.ಎಲ್. ಎಂಯೋಜನೆಯಡಿ ಸ್ವ–ಸಹಾಯ ಸಂಘಗಳು ಪ್ರಾರಂಭಿಸಲಾದ ಸಹೋದರಿ ಸಂಜೀವಿನಿ ಸೂಪರ್ ಮಾರ್ಕೆಟ್‌ಗೆ ಚಾಲನೆ ನೀಡಿ ಮಾಡನಾಡಿದಅವರು ಸಮುದಾಯಆಧಾರಿತ ಸಂಸ್ಥೆಗಳ ಮೂಲಕ ಲಾಭದಾಯಕ ವೇತನ ಮತ್ತು ಸ್ವ–ಉದ್ಯೋಗ ಅವಕಾಶಗಳನ್ನು ಒದಗಿಸುವ ಹಾಗೂ ಜೀವನೋಪಾಯಗಳನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಬಡತನವನ್ನು ಹೋಗಲಾಡಿಸಲುಡೇ–ಎನ್.ಆರ್.ಎಲ್.ಎಂಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯ ಸದುಪಯೋಗವನ್ನು ಸ್ವ–ಸಹಾಯ ಸಂಘಗಳು ಮುಂದೆ ಬರಬೇಕು–ಎಂದರು.

ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕಅಧಿಕಾರಿ ಶಶಿಧರ ಕುರೇರ ಮಾತನಾಡಿಎನ್.ಆರ್. ಎಲ್.ಎಂಯೋಜನೆಯಡಿ ಸ್ವ–ಸಹಾಯ ಸಂಘಗಳ ಸದಸ್ಯರು ಸಮುದಾಯ ಬಂಡವಾಳ ನಿಧಿ ಹಾಗೂ ಬ್ಯಾಂಕ ಲಿಂಕೇಜ್ ಮೂಲಕ ಸಾಲ ಸೌಲಭ್ಯ ಹಾಗೂ ಸ್ವ–ಉದ್ಯೋಗಕೌಶಲ್ಯತರಬೇತಿ ಪಡೆದುಕೊಂಡು ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ.

ಸದಸ್ಯರುತಯಾರಿಸುತ್ತಿರುವ ಉತ್ಪನ್ನಗಳಿಗೆ ಅಕ್ಕ, ಅಸ್ಮಿತೆ ಹೆಸರಿನ ಬ್ರ್ಯಾಂಡ್ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡಲುಒಂದು ವೇದಿಕೆ ಕಲ್ಪಿಸಿ ಕೊಡುವಉದ್ದೇಶದಿಂದ ಮತ್ತು ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆಕಲ್ಪಿಸಲು ಸಹೋದರಿ ಸಂಜಿವೀನಿ ಸೂಪರ್ ಮಾರ್ಕೆಟ್‌ಕಲ್ಪಿಸಲಾಗುತ್ತಿದೆ–ಎಂದರು.

ಸೂಪರ್ ಮಾರ್ಕೆಟ್‌ನ್ನುಗ್ರಾಮ ಪಂಚಾಯತ ಒಕ್ಕೂಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಆರ್. ಎಲ್.ಎಂ ಸ್ವ–ಸಹಾಯ ಗುಂಪುಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಇದೇರೀತಿಜಿಲ್ಲೆಯಜಮಖಂಡಿ ನಗರ, ಬಾದಾಮಿತಾಲೂಕಿನಕುಳಗೇರಿಕ್ರಾಸ್‌ಮತ್ತು ಬೀಳಗಿ ತಾಲೂಕಿನ ಬಾಡಗಿ ಪಟ್ಟಣದಲ್ಲಿ ಸಂಜೀವಿನಿ ಮಾರ್ಟ, ಕಿಯೋಸ್ಕಗಳನ್ನು ತೆರೆಯಲಾಗಿದೆಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿಶಾಸಕ ಹಾಗೂ ಬಿಟಿಡಿ–ಎಅಧ್ಯಕ್ಷಎಚ್.ವಾಯ್.ಮೇಟಿ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದತಾಲೂಕಾಅಧ್ಯಕ್ಷಎಸ್.ಎನ್. ರಾಂಪೂರ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್. ಬಸರಿಗಿಡದ, ಸಹಾಯಕಯೋಜನಾಧಿಕಾರಿ ಭೀಮಪ್ಪ ತಳವಾರ,ತಾಲೂಕಾ ಪಂಚಾಯತಕಾರ್ಯ ನಿರ್ವಾಹಕಅಧಿಕಾರಿ ಸುಭಾಷ ಸಂಪಗಾವಿ ಸೇರಿದಂತೆಇತರರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸ್ವ–ಸಹಾಯ ಸಂಘದ ಮಹಿಳೆಯರು ಸಚಿವರಿಗೆ, ಶಾಸಕ–ರಿಗೆಆರತಿ ಮಾಡುವ ಮೂಲಕ ಸೂಪರ್ ಮಾರ್ಕೆಟಗೆ ಸ್ವಾಗತಕೋರಿದರು.ನಂತರ ಮಾರ್ಕೆಟ್‌ನಲ್ಲಿಇಡಲಾದ ವಿವಿಧ ಉತ್ಪನ್ನಗಳನ್ನು ವೀಕ್ಷಣೆ ಮಾಡಲಾಯಿತು.

# ತೇರದಾಳದಲ್ಲಿ ಎಲ್ಲೆಡೆ ಹಾರಾಡಿದ ತಿರಂಗಾ



**ತೇರದಾಳ :** ಇಲ್ಲಿನ ಟಿಎಪಿಸಿಎಂಎಸ್ ಶಾಖೆಯಲ್ಲಿ ತಾಲೂಕು ನಿರ್ದೇಶಕ ಕಾಶಿನಾಥ ಕಾಲತಿಪ್ಪಿ, ಸಿದ್ಧೇಶ್ವರ ಓಣಿಯಲ್ಲಿ ಮಾಜಿ ಸೈನಿಕ ಸಿದ್ಧಾರೂಢ ಉಪ್ಪಾರ, ಶ್ರೀನಿಧಿ ಬ್ಯಾಂಕಿನಲ್ಲಿ ಸ್ಥಾನಿಕ ಚೇರಮನ್ ಮಹೇಶ ಯಾದವಾಡ, ಅಲ್ಲಮಪ್ರಭು ಖಾದಿ ಭಾಂಡಾರದಲ್ಲಿ ಬಸಪ್ಪ ಮುಕರಿ, ಸರಕಾರಿ ಕೆಜಿಎಸ್ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಮಹಾವೀರ ನಂದಗಾಂವ, ತೇರದಾಳ ವರ್ತಕರ ಬ್ಯಾಂಕಿನಲ್ಲಿ ಅಧ್ಯಕ್ಷ ಉಸ್ಮಾನ ಮುಜಾವರ, ಸರಕಾರಿ ಉರ್ದು ಪ್ರೌಢ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಅಲ್ತಾಫ್ ಹನಗಂಡಿ, ಪಿಕೆಪಿಎಸ್ ಪಶ್ಚಿಮ ಭಾಗ ಬ್ಯಾಂಕಿನಲ್ಲಿ ಚೇರಮನ್ ರಮೇಶ ಕಿತ್ತೂರ, ಸರಕಾರಿ ಚಾವಡಿಯಲ್ಲಿ ಗ್ರಾಮ ಆಡಳಿತಾಧಿಕಾರಿ ರೇವಣಸಿದ್ಧಯ್ಯ ಕಮತೆ, ಮಂಜುನಾಥ ಬ್ಯಾಂಕಿನಲ್ಲಿ ಅಧ್ಯಕ್ಷ ಗಣಪತಿ ಗಾಡಿವಡ್ಡರ, ಅಮನ್ ಬ್ಯಾಂಕಿನಲ್ಲಿ ಅಧ್ಯಕ್ಷ ಮುಸ್ತಾಕ ಸಂಗತ್ರಾಸ, ತಹಸೀಲ್ದಾರ್ ಕಚೇರಿಯಲ್ಲಿ ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಪ್ರಭುಲಿಂಗ ಬ್ಯಾಂಕಿನಲ್ಲಿ ಅಧ್ಯಕ್ಷ ಧರೆಪ್ಪ ಕಿತ್ತೂರ, ಬಾಪೂಜಿ ಬ್ಯಾಂಕಿನಲ್ಲಿ ಉದಯ ಬೆಳಗಲಿ, ಪಿಕೆಪಿಎಸ್ ಬ್ಯಾಂಕಿನಲ್ಲಿ ಅಧ್ಯಕ್ಷ ಸುನೀಲ ಆಳಗೊಂಡ, ಉಪನೋಂದಣಿ ಕಚೇರಿಯಲ್ಲಿ ನೋಂದಣಾಧಿಕಾರಿ ಎಸ್. ಪಿ. ಮುತ್ತಪ್ಪಗೋಳ, ಪೊಲೀಸ್ ಠಾಣೆಯಲ್ಲಿ ಠಾಣಾಧಿಕಾರಿ ಎಸ್. ಕೆ. ಸಿಂಗನ್ನವರ, ಸಿದ್ಧೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಕಾಶಿನಾಥ ತಳ್ಳಿ, ಪುರಸಭೆಯಲ್ಲಿ ಅಧ್ಯಕ್ಷೆ ಶಿಲ್ಪಾ ರೋಡಕರ 79 ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

# ಭಾರತ ವಿಶ್ವದ ಬಹುದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ



**ರಬಕವಿ-ಬನಹಟ್ಟಿ :** ತಾತ್ವಿಕ, ಭೌದ್ಧಿಕ, ವೈಜ್ಞಾನಿಕ, ಶೈಕ್ಷಣಿಕ, ಆರ್ಥಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಭಾರತವು ವಿಶ್ವದ ಬಹುದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಈ ದಿಶೆಯಲ್ಲಿ ಭಾರತವು ಸಂಪೂರ್ಣ ಸ್ವಾವಲಂಬನೆಯತ್ತ ದಾಪುಗಾಲು ಇರಿಸಿದೆ. ಭಾರತದ ಯುವಶಕ್ತಿ ಭಾರತವನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದೆ. ಪ್ರತಿಯೊಬ್ಬರು ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂದು ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ತಿಳಿಸಿದರು.

ಅವರು ಶುಕ್ರವಾರ ರಬಕವಿ-ಬನಹಟ್ಟಿ ತಹಶೀಲ್ದಾರ ಕಾರ್ಯಾಲಯದಲ್ಲಿ 79 ನೇ ಸ್ವಾತಂತ್ರ್ಯೋತ್ಸವದ ನಿಮಿತ್ಯಧ್ವಜಾರೋಹಣನೆರವೇರಿಸಿಮಾತನಾಡಿದರು. ನಮ್ಮ ದೇಶದ ಚರಿತ್ರೆಹಾಗೂ ಪರಂಪರೆಯ ಗರ್ಭದಲ್ಲಿ ಸಾಹಿತ್ಯಿಕ,

ತಾತ್ವಿಕ, ಧಾರ್ಮಿಕ, ಸಾಂಸ್ಕೃತಿಕ ಬಾಂಢಾರವಿದೆ. ಭಾರತದ ಬದುಕಿಗೆ ವೈವಿಧ್ಯಮಯ ಆಯಾಮಗಳಿವೆ. ಇಡೀ ದೇಶ ಅನೇಕತೆಯಲ್ಲಿ ಏಕತೆ ಸಾಧಸಿದೆ. ಏಕತೆಯಲ್ಲಿ ಅನೇಕತೆಯನ್ನು ಕಂಡು ಕೊಂಡಿದೆ. ಇಂಥ ವೈವಿಧ್ಯಮಯ ಸಾಂಸ್ಕೃತಿಕ ವೈಭವವನ್ನು ಹೊಂದಿದ ರಾಷ್ಟ್ರ ಇಡೀ ವಿಶ್ವದಲ್ಲೇ ಇನ್ನೊಂದಿಲ್ಲ ಎಂಬ ಹೆಮ್ಮೆ ನಮ್ಮದಾಗಿದೆ. ಇಂದು ನಮ್ಮ ರಾಷ್ಟ್ರ ತನ್ನ ಬೌದ್ಧಿಕ, ತಾತ್ವಿಕ, ವೈಜ್ಞಾನಿಕ ವೈಚಾರಿಕ ಬಲದಿಂದ ವಿಶ್ವಮಾನ್ಯತೆ ಗಳಿಸಿದೆ. ಇಲ್ಲಿಯ ಪ್ರತಿಯೊಬ್ಬ ಪ್ರಜೆ ಭಾರತ ಎಂಬುದನ್ನು ಇಡೀ ವಿಶ್ವವೇ ಮನಗಂಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪತಹಶೀಲ್ದಾರ ಶಾಂತಾ ಕೂಗಾಟೆ,ಆರ್.ಎಸ್.ಸಾತಿಹಾಳ,ಅಧಿಕಾರಿಗಳಾದಪಿ. ಆರ್. ಮಠಪತಿ, ಸದಾಶಿವ ಕುಂಬಾರ, ಮಂಜುನಾಥ ನೀಲನ್ನವರ, ಪ್ರಕಾಶ ವಂದಾಲ, ಚೇತನ ಭಜಂತ್ರಿ, ರವಿ ಹುಲ್ಲೆನ್ನವರ, ರವಿ ಗಡೆಪ್ಪನವರ, ಸಂಗೀತಾ ಮಿರ್ಜಿ, ದೀಪಾ ಮೇತ್ರಿ, ಮಹಾದೇವಿ ಗಸ್ತಿ, ಕಿಶೋರ ಸೋನೋನೆ, ರಾಜು ಮೇಲಿನಮನಿ, ಶ್ರೀಮಂತ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಜೀವನದಿ ಕೃಷ್ಣಾ ನದಿಯಲ್ಲಿ ನಿರಾಣಿ ಪರಿವಾರದ ಪುಣ್ಯಸ್ನಾನ





**ಜಮಖಂಡಿ :** ಮಾಜಿ ಸಚಿವ ಮುರಗೇಶ ನಿರಾಣಿ ಅವರ 60 ನೇ ವರ್ಷದ ಹುಟ್ಟು ಹಬ್ಬದ ಕಾರ್ಯಕ್ರಮದ ನಿಮಿತ್ಯ ಎಂ.ಆರ್. ಎನ್. ಫೌಂಡೇಶನ ಮತ್ತು ರೈತ ಸೇವಾ ಸಮೀತಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕುಂಭಮೇಳ, ಕೃಷ್ಣಾ ಪುಣ್ಯಸ್ನಾನ, ಕೃಷ್ಣಾರತಿ ಶನಿವಾರ ಬೆಳಿಗ್ಗೆ ತಾಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ಮಹಾರಾಜರ ದೇವಸ್ಥಾನದ ಆವರಣದ ಉತ್ತರವಾಹಿನಿ ಕೃಷ್ಣಾತೀರದಲ್ಲಿ ನಾಗಾ ಸಾಧುಗಳ ನೇತೃತ್ವದಲ್ಲಿ ನಿರಾಣಿ ಪರಿವಾರದವರು ಪುಣ್ಯಸ್ನಾನ ಮಾಡಿದರು.

ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳ ನೇತೃತ್ವದಲ್ಲಿ ವೇದ ಘೋಷಗಳು,ಮಂತ್ರಸಹಿತಶಾಸ್ತ್ರೋತ್ಕವಾಗಿ ಮುರಗೇಶ ನಿರಾಣಿಯವರಿಗೆ ಪುಣ್ಯ ಸ್ನಾನದ ಸಂಕಲ್ಪ ನೆರವೇರಿಸುವ ಮೂಲಕ ಕೃಷ್ಣಾ ನದಿಯಲ್ಲಿ ಹಾಲು, ಮೊಸರು, ತುಪ್ಪ, ಜೇನು ತುಪ್ಪದ ಅಭಿಷೇಕ ಸ್ನಾನವನ್ನು ಮಾಡಿಸಲಾಯಿತು.

ನಂತರ ನದಿ ತೀರದ ಮಂಟಪದಲ್ಲಿ ಭಸ್ಮ, ಅರಿಶಿಣ, ಕುಂಕುಮ, ಗಂಧ ಸ್ನಾನ ಮಾಡಿಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಸರದಿಯಲ್ಲಿ ಆಗಮಿಸಿ, ನಾಗಾ ಸಾಧುಗಳ ದರ್ಶನ ಪಡೆದರು.

**ಮೆರವಣಿಗೆ :** ತಾಲೂಕಿನ ಹಿಪ್ಪರಗಿ ಗ್ರಾಮದ ಪ್ರವೇಶ ದ್ವಾರದಿಂದ ಬೃಹತ್ ಮೆರವಣಿಗೆ ಚಾಲನೆಗೊಂಡಿತು. ನಾಗಾ ಸಾಧುಗಳನ್ನು ರಥಗಳಲ್ಲಿ, ದೇವರ ಪಲ್ಲಕ್ಕಿಗಳು, 108 ಕುಂಭಹೊತ್ತ ಮಹಿಳೆಯರು, ಡೊಳ್ಳು, ಕರಡಿ ಮಜಲು, ಶಹನಾಯಿ, ಕೊಂಬು ಸಹಿತ ಮಂಗಳವಾದ್ಯಗಳ ಸಮೇತ ಸಂಗಮೇಶ್ವರ ಮಹಾರಾಜರ ದೇವಸ್ಥಾನದವರೆಗೆ ಭವ್ಯ ಮೆರವಣಿಗೆ ಮೂಲಕ ಕರೆ ತರಲಾಯಿತು. ರಸ್ತೆಯುದ್ದಕ್ಕೂ ಅಸಂಖ್ಯಾತ ಅಭಿಮಾನಿಗಳು, ಭಕ್ತರು ಪುಷ್ಪವೃಷ್ಠಿಗೈದರು. ತೆರೆದ ವಾಹನ ಮೂಲಕ ಮಾಜಿ ಸಚಿವ ಮುರಗೇಶ ನಿರಾಣಿ ಅವರು ಮೆರವಣಿಗೆಯಲ್ಲಿ ಅಭಿಮಾನಿಗಳತ್ತ ಕೈಬೀಸಿ ಸಂತಸ ವ್ಯಕ್ತಪಡಿಸಿದರು. ಉದ್ದನೆಯ ಮೆರವಣಿಗೆ ವೀಕ್ಷಣೆ ಮಾಡಲು ಗ್ರಾಮಸ್ಥರು, ಭಕ್ತಾಧಿಗಳು, ಅಭಿಮಾನಿಗಳು ಮನೆಯ ಮಾಳಿಗೆ ಮೇಲೆ ನಿಂತು ಸಂಭ್ರಮವನ್ನು ವೀಕ್ಷಿಸಿದರು.

**ವಿಶೇಷ ಪೂಜೆ :** ಮಾಜಿ ಸಚಿವ ಮುರಗೇಶ ನಿರಾಣಿ ಅರವತ್ತನೇ ವರ್ಷದ ಹುಟ್ಟುಹಬ್ಬ ನಿಮಿತ್ಯ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದಲ್ಲಿ ಹಾಗೂ ತಾಲೂಕಿನ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳನ್ನು ಅಭಿಮಾನಿಗಳು ಹಮ್ಮಿಕೊಂಡಿದ್ದರು. ದೇವಸ್ಥಾನದಲ್ಲಿ ಅಭಿಷೇಕ, ಅಲಂಕಾರ, ಮಂಗಳಾರತಿ ಸಹಿತ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಮುರಗೇಶ ನಿರಾಣಿ, ಸಹೋದರರಾದ ಲಕ್ಮಣ, ಹಣಮಂತ, ಸಂಗಮೇಶ ದಂಪತಿ ಸಮೇತರಾಗಿ ಪೂಜೆ ಜೊತೆಗೆ ಪುಣ್ಯಸ್ನಾನದಲ್ಲಿ ಭಾಗವಹಿಸಿದ್ದರು.

**ನಾಗಾಸಾಧುಗಳು:** ದೇವನಂದಗಿರಿ ಬಾಬಾ ನೇತೃತ್ವದಲ್ಲಿಅಂದಾಜು ಇಪ್ಪತ್ತೈದಕ್ಕೂಹೆಚ್ಚು ನಾಗಾ ಸಾಧುಗಳು ಕೃಷ್ಣಾನದಿಯಲ್ಲಿ ಪೂಜಾ ವಿಧಿ ವಿಧಾನಗಳನ್ನು ಕೈಗೊಂಡರು. ವಿವಿಧ ಭಾಗಗಳಿಂದ ಆಗಮಿಸಿದ್ದ ಹತ್ತಾರು ಸಾಧು ಸಂತರು ಕೃಷ್ಣಾ ಪುಣ್ಯಸ್ನಾನದಲ್ಲಿ ಭಾಗವಹಿಸಿ ನಿರಾಣಿ ಪರಿವಾರ ಹಾಗೂ ನೆರೆದಿದ್ದ ಭಕ್ತ ಸಮೂಹವನ್ನು ಆಶೀರ್ವದಿಸಿದರು.

ಇದೇ ಸಂದರ್ಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಪಿ. ಎನ್. ಪಾಟೀಲ, ಪುಂಡಲೀಕ ಪಾಲಭಾಂವಿ, ಸೋಮನಾಥಗೌಡ ಪಾಟೀಲ, ಶಂಕರಗೌಡ ಪಾಟೀಲ, ಚಂದ್ರಶೇಖರ ಆದಬಸಪ್ಪಗೋಳ, ಭೀಮಪ್ಪ ಹನಗಂಡಿ, ಗೂಳಪ್ಪ ಶಿವಪೂಜಿ, ವೆಂಕಟೇಶ ಜಂಬಗಿ, ಪ್ರಭು ಜನವಾಡ, ಚಂದ್ರು ಜನವಾಡ, ಕಾಶೀನಾಥ ಜನಗೊಂಡ, ಎಂ.ಆರ್.ಎನ್. ಫೌಂಡೇಶನ ನಿರ್ದೇಶಕರ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

# ಯೋಧರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ: ಶಾಸಕ ಸವದಿ



**ಚಿಮ್ಮಡ :** ಕೊರೆಯುವ ಚಳಿಯಲ್ಲೂ ಗಟ್ಟಿಯಾಗಿ ನಿಂತು ಗಡಿ ಕಾಯುವ ಯೋಧರು ಹಗಲು ರಾತ್ರಿ ಎನ್ನದೇ ನಮ್ಮನ್ನು ಸಂರಕ್ಷಿಸುತಿದ್ದಾರೆ. ಅವರನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಮಾದರಿ ಶಾಲೆಯ ಆವರಣದಲ್ಲಿಆಯೋಜಿಸಲಾಗಿದ್ದ ವೀರ ಯೋಧ ಮಂಜುನಾಥ ಮೇತ್ರಿಯವರ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ನಾವಿಲ್ಲಿ ಸುಖವಾಗಿ ನಿದ್ರೆ ಮಾಡಲು ಕಾರಣವೆಂದರೆ,ಅದುದೇಶದಗಡಿ ಕಾಯುವ ಯೋಧರು. ನಿದ್ದೆಗೆಟ್ಟು ನಮಗಾಗಿಗಡಿಕಾಯುತ್ತಾರೆ.ದೇಶ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ವೀರ ಸೇನಾನಿಗಳ ಕುಟುಂಬವನ್ನು ಕಾಯುವುದು ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯಾಗಿದೆ ಎಂದರು.

ಕಾಂಗ್ರೆಸ್ ಧುರೀಣೆ ಕವಿತಾ ಸಿದ್ದು ಕೊಣ್ಣೂರ ಮಾತನಾಡಿ, ಯೋಧರು ದೇಶದ ಆತ್ಮ ಇದ್ದಂತೆ. ಅವರು ದೇಶದೊಂದಿಗಿದ್ದರೆ ನಾವು ಅವರ ಕುಟುಂಬದೊಂದಿಗೆ ಇರೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಬಂಗಾರೆವ್ವ ಜಾಲಿಕಟ್ಟಿ ವಹಿಸಿದ್ದರು. ಮುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಣ್ಣ ಬಗನಾಳ, ಗುರಲಿಂಗಪ್ಪಾ ಪೂಜಾರಿ, ಶಂಕರ ಬಟಕುರ್ಕಿ, ಅಶೋಕಧಡೂತಿ,ಆನಂದಕವಟಿ, ಬಸವರಾಜ ಕುಂಚನೂರ, ಪ್ರಕಾಶ ಪಾಟೀಲ, ಪ್ರಭು ಮುಧೋಳ, ಮಹಾಲಿಂಗ ಮಾಯಣ್ಣವರ, ಶಿವಪ್ಪಾ ನಾಗನೂರ, ಅಶೋಕ ಮೋಟಗಿ, ರಾಜು ಬಗನಾಳ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಕಸ್ತೂರಿ ಮೇತ್ರಿ, ರಮೇಶ ಮೇತ್ರಿ, ಪಿಡಿಓ ಶಿವಾನಂದ ಬಿರಾದಾರ ಸೇರಿದಂತೆ ಯೋಧನ ಕುಟುಂಬಸ್ಥರು, ಮಾಜಿ ಯೋಧರ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಕ್ಷಕ ಮಹಾಂತೇಶ ಬಡಿಗೇರ, ರವಿ ದೊಡವಾಡ ಸ್ವಾಗತಿಸಿ ನಿರೂಪಿಸಿದರು.

# ಚಂದ್ರಶೇಖರ ಬೀಳಗಿ ನಿಧನ



**ಬನಹಟ್ಟಿ:** ಇಲ್ಲಿಯ ಕೆಎಚ್ಡಿಸಿ ಕಾಲನಿ ನಿವಾಸಿ, ನಿವೃತ್ತ ಚಿತ್ರಕಲಾ ಶಿಕ್ಷಕ ಚಂದ್ರಶೇಖರ ಬೀಳಗಿ ತಮ್ಮ 86 ನೆಯ ವಯಸ್ಸಿನಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಬಸವೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಜರುಗಿದ ಜಂಗಿ ಕುಸ್ತಿ ಫೈನಲ್



**ಬಸವನಬಾಗೇವಾಡಿ :** ಶ್ರೀ ಮೂಲ ನಂದೇಶ್ವರ ಬಸವೇಶ್ವರ ಜಾತ್ರ ನಿಮಿತ್ಯವಾಗಿ ಬುಧವಾರ ಸಂಜೆ ಶ್ರೀ ಗುರು ಕೃಪಾ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಡೆದ ಫೈನಲ್ ಜಂಗಿ ಕುಸ್ತಿಗಳು ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯ ಜಿಲ್ಲೆಗಳಿಂದ ಆಗಮಿಸಿದ ಜಗಜಟ್ಟಿಗಳು ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸುವುದು ವಿಶೇಷವಾಗಿತ್ತು ಜಗ ಜಟ್ಟಿಗಳಿಗೆ ಬಿಳಿ ಕಡೆ ಹಾಗೂ ನಗದು ಬಹುಮಾನ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು ಬಸವೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಜಾತ್ರಾ ಉತ್ಸವ ಅಧ್ಯಕ್ಷ ರವಿ ರಾಠೋಡ್ ಪುರಸಭೆಯ ಉಪಾಧ್ಯಕ್ಷ ಅಶೋಕ್ ಹಾರಿವಾಳ ಸಂಗನಗೌಡ ಚಿಕ್ಕೊಂಡ ಗುರುಲಿಂಗ ಬಸರ ಕೂಡ ರಮೇಶ್ ಮೆಸಬಿನಾಳ ಸಿದ್ದರಾಮ್ ಪಾತ್ರೋಟಿ ಅನಿಲ್ ಪವಾರ ಮೀರಾ ಸಾಬ ಕೋರಬ ಮಲ್ಲು ಪಡಶೆಟ್ಟಿ ದಯಾನಂದ ಜಾಲಗೇರಿ ಮುಂತಾದವರಿದ್ದರು

# ಲಿಂಗಪೂಜೆ ಶಿವನನ್ನು ಆರಾಧಿಸುವ ಆಚರಣೆ



**ತಾಳಿಕೋಟೆ :** ಲಿಂಗಪೂಜೆ ಎನ್ನುವದು ಒಂದು ಪ್ರಮುಖ ಆಚರಣೆಯಾಗಿದ್ದು ಇದು ಭಕ್ತಿ ಆದ್ಯಾತ್ಮೀಕತೆ ಮತ್ತು ಮೋಕ್ಷದ ಮಾರ್ಗವನ್ನು ಸೂಚಿಸುತ್ತದೆ ಎಂದು ನಿವೃತ್ತ ಶಿಕ್ಷಕರಾದ ವೇ. ಎಸ್.ಎಂ.ಬೇನಾಳಮಠ ಅವರು ಹೇಳಿದರು.

ಬುಧವಾರರಂದು ಸ್ಥಳೀಯ ಬಣಜಗ ಸಮಾಜದ ಮಹಿಳಾ ಘಟಕದ ವತಿಯಿಂದ ಭಜಾರ ಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಏರ್ಪಡಿಸಲಾದ ಲಿಂಗಪೂಜಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವಿಕರಿಸಿ ಲಿಂಗ ಪೂಜೆಯ ಮಹತ್ವ ಕುರಿತು ತಿಳುವಳಿಕೆ ನೀಡಿದ ಅವರು ಈ ಪೂಜೆಯು ಭಗವಂತನ ನಿರಾಕಾರ ಸ್ವರೂಪವನ್ನು ಪ್ರತಿನಿಧಿಸುತ್ತದೆ ಲಿಂಗ ಎಡ ಅಂಗೈಯಲ್ಲಿ ಇರಿಸಲಾಗಿರುವಾಗ ದಿಟ್ಟಿಸಿ ನೋಡಿದಾಗ ಓಂ ನಮಃ ಶಿವಾಯ ಎಂಬ ಮಂತ್ರವನ್ನು ಮನದಲ್ಲಿ ಪಠಿಸಿದರೆ ಇಷ್ಟ ಲಿಂಗದಲ್ಲಿ ಪ್ರತಿಫಲಿಸುವ ಬೆಳಕಿನ ಕಣವನ್ನು ನೋಡುವ ದೃಷ್ಠಿಯೋಗ ಇದು ಲಿಂಗಯೋಗದ ಸಾರವಾಗಿದೆ ಎಂದರು. ಮುಚ್ಚಿದ ಕಣ್ಣುಗಳೊಂದಿಗೆ ಮನದಲ್ಲಿ ಭಕ್ತಿಯಿಂದ ಲಿಂಗವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರಿಕರಿಸುವ ಕಾರ್ಯಕ್ಕೆ ಮುಂದಾಗಬೇಕು ಅಂದಾಗ ಲಿಂಗಪೂಜೆದ ಮಹತ್ವ ಎಂತಹದ್ದೆಂಬುದು ಅರಿವಾಗುತ್ತದೆ ಎಂದು ಹೇಳಿದ ಅವರು ಗುರುಲಿಂಗ ಜಂಗಮ, ಅಷ್ಟಾವರಣ, ಷಟಸ್ಥಲ, ಪಾದೋದಕ, ಪ್ರಸಾದ, ವಿಭೂತಿ ಧಾರಣೆ ಕುರಿತು ಅನೇಕ ಲಿಂಗಪೂಜಾ ಸಂಬಂದಿತ ವಿಚಾರಗಳನ್ನು ಉಪಸ್ಥಿತ ಮಹಿಳಾ ಘಟಕದವರಿಗೆ ಪ್ರಾತ್ಯಕ್ರೀಯ ಮೂಲಕ ವಿವರಿಸಿದರು.

ಇದೇ ಸಮಯದಲ್ಲಿ ಉಪಸ್ಥಿತರಾದ ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಸನ್ಮಾನ ಸ್ವಿಕರಿಸಿ ಮಾತನಾಡಿ ಬಣಜಗ ಸಮಾಜದ ಮಹಿಳಾ ಘಟಕವು ಈ ಹಿಂದಿನಿಂದಲೂ ತನ್ನದೇ ಆದ ಗೌರವದೊಂದಿಗೆ ಸಾಗಿಬಂದಿದೆ ಈ ಘಟಕದಲ್ಲಿರತಕ್ಕಂತಹ ಪದಾಧಿಕಾರಿಗಳ ಹಾಗೂ ಸದಸ್ಯನಿಯರ ವಿಚಾರಗಳು ಬಹಳೇ ಮಹತ್ವದವುಗಳಾಗಿದ್ದು ಇಂತಹ ವಿಚಾರಗಳು ಕೇವಲ ತಮ್ಮದೇ ಆದಂತಹ ಸಭೆಗಳಲ್ಲಿ ಹೊರ ಹಾಕುವಂತೆ ಅನ್ಯ ಕಾರ್ಯಕ್ರಮಗಳಲ್ಲಿಯೂ ಕೂಡಾ ತಮ್ಮೆಲ್ಲ ವಿಚಾರಗಳನ್ನು ಹೊರ ಹಾಕಿದರೆ ಅನ್ಯ ಮಹಿಳೆಯರಿಗೂ ಕೂಡಾ ಅನುಕೂಲವಾಗಲಿದೆ ಎಂದರು. ಬಣಜಗ ಸಮಾಜದ ಹಿರಿಯರಾದಂತಹ ಶಿವಲಿಂಗಪ್ಪ ಮುತ್ಯಾ ಅವರು ಸ್ವಾತಂತ್ರ್ಯಯೋದರಾಗಿ ಹೋಗಿದ್ದಾರೆ ಸುಮಾರು 200 ವರ್ಷಗಳ ಇತಿಹಾಸ ಉಳ್ಳ ಇವರು ಮಾಡಿದಂತಹ ಬ್ರಿಟಿಷರ ಕಾಲದ ಅವಧಿಯಲ್ಲಿ ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ಗೈದಿರುವದು ಇಡೀ ದೇಶಕ್ಕೂ ಗೊತ್ತಿದೆ ಅಂತಹ ಮನೆತನದವರಾದ ಸಾಲಂಕಿ ಮನೆತನದವರಾಗಲಿ, ಸರಶೆಟ್ಟಿ ಮನೆತನದವರಾಗಲಿ, ಬಳಗಾನೂರ ಮನೆತನದವರು, ಕತ್ತಿ ಮನೆತನದವರಾಗಲಿ ಈ ಎಲ್ಲರೂ ಶ್ರೀಮಂತ ವರ್ಗದವರಾಗಿದ್ದರಿಂದ ಈ ಸಮಾಜದ ಇತಿಹಾಸ ಇನ್ನೂ ಪ್ರಜ್ವಲಿಸುತ್ತಾ ಸಾಗಿದೆ ಎಂದ ಘೋರ್ಪಡೆ ಅವರು ಈ ಸಂಘಟನೆ ಇನ್ನೂ ಹೆಚ್ಚಿಗೆ ಉತ್ತರೋತ್ತರವಾಗಿ ಬೆಳೆದು ಇಂದು ಜರುಗಿದ ಲಿಂಗಪೂಜೆಗಳಂತಹ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಸಾಗಿ ಎಲ್ಲರಿಗೂ ಸನ್ಮಾರ್ಗಕ್ಕೆ ಒಯುವ ಕಾರ್ಯವಾಗಬೇಕು ಹಾಗೂ ಇನ್ನಿತರ ಮಹತ್ವದ ಕಾರ್ಯಕ್ರಮಗಳನ್ನು ಏರ್ಪಡಿಸಿ ಸರ್ಕಾರದ ಸೌಲಭ್ಯಗಳನ್ನು ಕೂಡಾ ಪಡೆಯುವ ಕಾರ್ಯ ಮಾಡಬೇಕೆಂದು ಸಲಹೆ ನೀಡಿದರು.

ಇನ್ನೋರ್ವ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಶಿಲ್ಪಾ ಕಿಣಗಿ ಅವರು ಮಾತನಾಡಿ ಇಂದು ಸಮಾಜದ ಎಲ್ಲ ಮಹಿಳೆಯರು ಲಿಂಗಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಕ್ತಿಭಾವ ಮೆರೆದಿರುವದು ಆನಂದವನ್ನುಂಟು ಮಾಡಿದೆ ಇಂತಹ ಕಾರ್ಯಕ್ರಮಗಳು ಪ್ರತಿವರ್ಷ ನಮ್ಮ ಸಂಘಟನೆಯಿಂದ ಜರುಗುತ್ತಾ ಸಾಗಲಿವೆ ಎಲ್ಲರೂ ಈ ಹಿಂದಿನಂತೆ ಮುಂದೆಯೂ ಕೂಡಾ ತಮ್ಮ ಸಹಕಾರ ನೀಡುವದರೊಂದಿಗೆ ಕಾರ್ಯಕ್ರಮಗಳ ಯಶಸ್ವಿಗೆ ಶ್ರಮಿಸುವ ಕಾರ್ಯ ಮಾಡೋಣವೆಂದರು.

ಈ ಕಾರ್ಯಕ್ರಮದಲ್ಲಿ ಡಾ.ದೀಪಾ ಮಾಳಗೆ, ಎನ್.ಸಿ.ತಾಳಿಕೋಟಿ, ಸುರೇಖಾ ಸಾಲಂಕಿ, ಯು.ಬಿ.ಸಾಲಂಕಿ, ಶೈಲಾ ಅರಕೇರಿ, ಸಾವಿತ್ರಿ ಅರಕೇರಿ, ಸುಧಾ ಮಡ್ಡಿ, ಸುವರ್ಣಾ ಅಸ್ಕಿ, ಚಂದ್ರಕಲಾ ದೇವಶೆಟ್ಟಿ, ಲಲಿತಾ ಮಡ್ಡಿ, ಶೃತಿ ಪಾಲ್ಕಿ, ವನಿತಾ ಸರಶೆಟ್ಟಿ, ರೇವತಿ ಸರಶೆಟ್ಟಿ, ದೀಪಾ ಕತ್ತಿ, ಪ್ರತಿಭಾ ಕತ್ತಿ, ಗೀತಾಂಜಲಿ ಬಳಗಾನೂರ, ಪ್ರಭಾವತಿ ಕತ್ತಿ, ಎಲ್.ಎ.ಇವಣಗಿ, ಉಮಾ ಘೀವಾರಿ, ಶೋಭಾ ಜಮ್ಮಲದಿನ್ನಿ, ಗಿರಿಜಾ ಜಮ್ಮಲದಿನ್ನಿ, ವೀಣಾ ಸರಶೆಟ್ಟಿ, ಸುಜಾತಾ ಕತ್ತಿ, ಸ್ನೇಹಾ ಸಾಲಂಕಿ, ರತ್ನಕಲಾ ಸರಶೆಟ್ಟಿ, ಮನಸ್ವಿ ಸಾಲಂಕಿ, ಸುಮಂಗಲಾ ಕಲ್ಬುರ್ಗಿ, ಸುಜಾತಾ ಸರಶೆಟ್ಟಿ, ಮೊದಲಾದವರು ಉಪಸ್ಥಿತರಿದ್ದು ಲಿಂಗಪೂಜಾ ಕಾರ್ಯಕ್ರಮ ನೆರವೇರಿಸಿದರು.

ಶ್ರೀಮತಿ ಉಮಾ ಸಾಲಂಕಿ, ಸ್ವಾಗತಿಸಿ ನಿರೂಪಿಸಿದರು.

# ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ : ಶಾಸಕ ಲಕ್ಷ್ಮಣ ಸವದಿ



**ಅಥಣಿ :** ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದ್ದು ಜೀವ ರಕ್ಷಣಾ ಕವಚ ಹೆಲ್ಮೆಟ್ ನ್ನು ಕಡ್ಡಾಯವಾಗಿ ಧರಿಸಿರಿ ನಿಮ್ಮ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಿ ಎಂದು ಶಾಸಕ ಲಕ್ಷ್ಮಣ ಸವದಿ ಮನವಿ ಮಾಡಿದರು

ಅವರು ಪಟ್ಟಣದಲ್ಲಿ ಮಾತನಾಡುತ್ತಾ ಬೈಕ್ ಸವಾರರು ರಸ್ತೆಯಲ್ಲಿ ಸಂಚರಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು.

ಇದರಿಂದ ನಿಮ್ಮ ಸುರಕ್ಷೆಯ ಜೊತೆಗೆ ಪ್ರಾಣಾಪಾಯದಿಂದ ಪಾರಾಗಬಹುದು ರಸ್ತೆ ನಿಯಮಗಳನ್ನು ಅರಿತು ಜಾಗರೂಕತೆಯಿಂದ ವಾಹನಗಳನ್ನು ಚಲಾಯಿಸಬೇಕು. ಅವಸರವೇ ಅಪಘಾತಕ್ಕೆ ಕಾರಣ ರಸ್ತೆ ನಿಯಮಗಳನ್ನು ಪಾಲಿಸಬೇಕು. ಶಾಲೆ- ಕಾಲೇಜು, ಜನನಿಬಿಡ ಪ್ರದೇಶದಲ್ಲಿ ವೇಗವಾಗಿ ಬೈಕ್ ಚಲಾಯಿಸದೆ, ತಿರುವಿನಲ್ಲಿ ಜಾಗ್ರತೆಯಿಂದ ಸಾಗಬೇಕು ಎಂದರು.

ಹೆಲ್ಮೆಟ್ ಧರಿಸದವರನ್ನು ಹಿಡಿದು ದಂಡ ವಿಧಿಸುವುದು ಪೊಲೀಸರ ಉದ್ದೇಶವಲ್ಲ.

ಪ್ರತಿಯೊಬ್ಬರೂ ಹೆಲ್ಮೆಟ್ ಧರಿಸಿ ತಮ್ಮ ಅಮೂಲ್ಯ ಜೀವ ಕಾಪಾಡಲಿ ಎಂಬ ಸದುದ್ದೆ?ಶ ಪೊಲೀಸ್ ಇಲಾಖೆಯದ್ದಾಗಿದೆ. ಯಾವುದೇ ಜನ ಹಿತಾಸಕ್ತಿಯ ಯೋಜನೆ ಸಾಕಾರವಾಗಲು ಜನರ ಸಹಭಾಗಿತ್ವ ಅತಿ ಮುಖ್ಯ. ಆದ್ದರಿಂದ ಸಾರ್ವಜನಿಕರು ಸ್ವಯಂ ಪ್ರೆ?ರಣೆಯಿಂದ ಹೆಲ್ಮೆಟ್ ಧರಿಸುವ ಮೂಲಕ ಪೊಲೀಸ್ ಇಲಾಖೆಯ ಕಾರ್ಯಕ್ಕೆ ಕೈಜೋಡಿಸಬೇಕು. ಮನೆಯಲ್ಲಿ ಯಾರೇ ಆದರೂ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದರೆ ಅವರನ್ನು ಎಚ್ಚರಿಸುವುದು ಯುವಕರ ಕರ್ತವ್ಯ. ಮುಖ್ಯವಾಗಿ ಯುವಕರು ಮೊದಲು ಹೆಲ್ಮೆಟ್ ಧರಿಸುವ ಮೂಲಕ ಎಲ್ಲರಿಗೂ ಮಾದರಿಯಾಗಬೇಕು ಎಂದು ಅವರು ಹೇಳಿದ ಅವರು ಹೆಲ್ಮೆಟ್ ಧರಿಸಿ ಜೀವ ಕಾಪಾಡಿಕೊಳ್ಳಿ ಪೊಲೀಸರ ಕಾರ್ಯ ನಿಜಕ್ಕೂ ಒಳ್ಳೆಯದು. ಹೆಲ್ಮೆಟ್ ಧರಿಸುವುದರಿಂದ ಅಪಘಾತದ ಸಂದರ್ಭದಲ್ಲಿ ಜೀವ ಉಳಿಯುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಹೆಲ್ಮೆಟ್ ಹಾಕುವಂತೆ" ಮನವಿ ಮಾಡಿದರು.

# ಎಲ್ಲ ಅಂಗಗಳಿಗೆ ಮಹತ್ವ ನೀಡಿದಂತೆ ಹಲ್ಲುಗಳಿಗೂ ಮಹತ್ವದ ನೀಡಿ : ಡಾ,ಪರಮಾನಂದ ಬಿರಾದಾರ



**ಇಂಡಿ :** ಮನುಷ್ಯನಿಗೆ ಹಲ್ಲುಗಳು ಅತೀ ಮಹತ್ವದ ಅಂಗ. ಅಹಾರ ಚೆನ್ನಾಗಿ ನುರಿಸಲು ದಂತಗಳ ಕಾರ್ಯ ಮಹತ್ವದ್ದು ಹೀಗಾಗಿ ನಾವು ದಂತಗಳ ಕಾಳಜಿ ಮಾಡಬೇಕಾದ ಅವಶ್ಯಕತೆ ಇದೆ ಎಂದು ಡಾ॥ ಪರಮಾನಂದ ಬಿರಾದಾರ ಹೇಳಿದರು.

ಪಟ್ಟಣದ ನಿಲೇಶ ಇವಣಿ ಇವರ ಆಸ್ಪತ್ರೆಯಲ್ಲಿ ಸ್ವಾತಂತ್ರೊತ್ಸವನಿಮಿತ್ಯನಡೆದಉಚಿತದಂತ ಚಿಕಿತ್ಸೆ ಶಿಬಿರದಲ್ಲಿ ಮಾತನಾಡುತ್ತಿದ್ದರು.

ಮನುಷ್ಯನಿಗೆ ಎಲ್ಲ ಅಂಗಂಗ ಗಳಂತೆ ಹಲ್ಲು ಕೂಡ ಅಷ್ಟೇ ಮುಖ್ಯ. ಎಲ್ಲ ಅಂಗಗಳಿಗೆ ಮಹತ್ವ ನೀಡಿದಂತೆ ಹಲ್ಲಿಗೂ ಮಹತ್ವ ನೀಡಿ ಅದರ ಆರೈಕೆ ಆರೋಗ್ಯಕ್ಕೆ ಉತ್ತಮ ಎಂದರು.

ವೈದ್ಯ ನಿಲೇಶ ಇವಣಿ ಮಾತನಾಡಿ ದಂತುಗಳಿಗೆ ಅಲ್ಜೆನರ್ಸ,ಸೆರಾಮಿಕ ತಂತಿ,ಹಲ್ಲು ಸ್ವಚ್ಛ ಗೊಳಿಸುವದು, ಡಿಜಿಟಲ್ ಎಕ್ಸರೇ, ರೂಟ್ ಕೆನಲ್ ಚಿಕಿತ್ಸೆ, ಚಿಕ್ಕ ಮಕ್ಕಳ ಹಲ್ಲಿನ ಚಿಕಿತ್ಸೆ, ಹಲ್ಲು ಕೀಳುವರು, ಅಕಲ್ ಹಲ್ಲು ಕೀಳುವದು,ಹಲ್ಲು ಸ್ವಚ್ಛ ಗೊಳಿಸುವದು,ಹಲ್ಲಿನ ಸೆಟ್, ನಗುವಿನ ವಿನ್ಯಾಸ,ಕ್ಯಾಪ ಮತ್ತು ಬ್ರಿಡ್ಜ ಫಿಕ್ಸೆಡ್ ಹಲ್ಲಿನ ಸೆಟ್ ಮುಂತಾದ ಕಾಳಜಿಗಳಗೆ ದಂತ ವೈದ್ಯರನ್ನು ಭೇಟಿ ನೀಡಿ ಆರೈಕೆ ತೆಗೆದುಕೊಳ್ಳುವದು ಉತ್ತಮ.

ಡಾ॥ ಲಕ್ಷಿಕಾಂತ ಮೇತ್ರಿ, ಚಂದ್ರಶೇಖರ ಇವಣಿ, ಮಹೇಶ ಝುಂಪಾ, ಉಮೇಶ ಬಳಬಟ್ಟಿ,

ಡಾ॥ ವಿಪುಲ್ ಕೋಳೆಕರ ಮತ್ತಿತರರು ಉಪಸ್ಥಿತರಿದ್ದರು.

ಸುಮಾರು 300 ಕ್ಕೂ ಹೆಚ್ಚು ಜನರು ಉಚಿತ ದಂತ ಚಿಕಿತ್ಸೆ ಲಾಭ ಪಡೆದರು.

# ಆಲಮೇಲದಲ್ಲಿ ಪುರಾಣ-ಪ್ರವಚನ ಆರಂಭ



**ಆಲಮೇಲ :** ಶ್ರಾವಣ ಮಾಶದ ನಿಮಿತ್ಯ ಪಟ್ಟಣದ ಗ್ರಾಮ ದೇವರು ಸಾವಳಗಿ ಶಿವಲಿಂಗೇಶ್ವರ ಜಾತ್ರಾ ಮೂಹತ್ಸವ ಸಂಬ್ರಮದಿಂದ ದಿ
21ರವರೆಗೆ ವಿವಿದ ಕಾರ್ಯಕ್ರಮಗಳು ಜರಗುವವು ಗುಡ್ಡಾಪೂರ ದಾನಮ್ಮ ದೇವಿ ಪುರಣ ಪ್ರವಚನ ನ್ಯಾಯವಾದಿ ಅಶೋಕ ಗಾಯಕವಾಡ ಚಾಲನೆ ನಿಡಿ ಮಾತನಾಡಿದರು ಸಾವಳಗಿ ಶಿವಲಿಂಗೇಶ್ವರ ಜೀವನ ಚರಿತ್ರೆ ಬಣ್ಣಿಸಿ ಹಾಗೂ ದಾನಮ್ಮ ದೇವಿಯ ಪವಾಡ ಹೇಳಿ 12 ನೇಯ ಶತಮಾನದ ಶರಣರ ಅನುಭವ ಹಂಚಿದರು
ಗ್ರಾಮದ ಹಿರಿಯರಾದ ಶಿವುಕುಮಾರ ಗುಂದಗಿ ಆದ್ಯಕ್ಷತೆ ವಹಿಸಿ ಮಾತನಾಡಿದರು ಕಾರ್ಯಕ್ರಮದ ಸಾನಿದ್ಯ ಚಂದ್ರಶೇಖರ ಶಿವಾಚಾರ್ಯರು ವಹಿಸಿ ಆರ್ಶಿವಚನ ನಿಡಿದರು ಮ.ನಿ.ಪ್ರ,ಜಗದೇವ ಮಲ್ಲಿಬೋಮ್ಮ ಸ್ವಾಮಿಗಳು ವಾಣಿಯಿಂದ ಪ್ರವಚನ ಆರಂಭ ದಾನಮ್ಮ ದೇವಿಯ ಪವಾಡಗಳು ಬಿತ್ತರಿಸಿದರು
ಪ್ರಗತಿ ಪರ ರೈತ ಗೋಲ್ಲಾಳಮತ್ತು ಹಿರಿಯರಾದ ಶಂಕರ ಹಳಿಮನಿ ದಾನಮ್ಮ ದೇವಿಯ ಬಾವ ಚಿತ್ರಕೆ ಪೂಜಾ ನೇರವೇರಿಸಿದರು ಪ.ಪಂ ಸದಸ್ಯ ಮೈಬು ಮಸಳಿ ದಾಸೋಹ ಏರ್ಪಡಿಸಿದರು
ಶಿವಪ್ಪ ಹಳಿಮನಿ ನಾನಗೌಡ ಅಫಲಪೂರ ಬಾಬು ಕೊತಂಬರಿ ಪತ್ರಕರ್ತ ಅಮರ ನಾರಯಣಕರ ವರ್ತಕ ಕಾಳೇಶ್ವರ ಪತ್ತಾರ ಕಮಿಟಿ ನಿರ್ದೇಶಕ ವಿದ್ಯಾದರ ರಸ್ತಾಪುರ ಮಠ ಅರ್ಚಕ ಚೆನ್ನಯ್ಯ ಸಾರಂಗ ಮಠ ರಮೇಶ ಅಫಜಲಪೂರ ಪ.ಪಂ ಸದಸ್ಯ ಚಂದ್ರಶೇಖರ ಹಳಿಮನಿ ನೇಮಣ್ಣ ಒಣಕುದರಿ ಹಂಪಣ ಹಡಪದ ಗುರಸಿದ್ದ ಕಿಣಗಿ ಅಪ್ಪಾಬ ಅಫಲಪೂರ ಗುರು ಕಲಶೇಟ್ಟಿ
ಗುಣದಾರ ಒನಕುದರಿ ಅಂಬಾದಾಸ ಅಲೋಣಿ ಭಕ್ತ ವೃಂದ ಇದ್ದರು ಅಪ್ಪುಶೇಟ್ಟಿ ಪ್ರೋ;ಸಿದ್ದಲಿಂಗ ಕಾರ್ಯಕ್ರಮ ನಿರುಪಿಸಿದರು

# 6ನೇ ತರಗತಿ ಪ್ರವೇಶಕ್ಕೆ ಕೌನ್ಸಲಿಂಗ್



**ಬಾಗಲಕೋಟೆ :** ನವನಗರದ ಸೆಕ್ಟರ್ ನಂ.49 ರಲ್ಲಿರುವ ಆದರ್ಶ ವಿದ್ಯಾಲಯದ ಆರನೇ ತರಗತಿಯ ವಿದ್ಯಾರ್ಥಿಗಳ 4ನೇ ಸುತ್ತಿನ ಕೌನ್ಸಲಿಂಗ್ ಯಶಸ್ವಿಯಾಗಿ ಜರುಗಿತು.
ಬುಧವಾರ ಶಾಲೆಯ ಸಭಾ ಭವನದಲ್ಲಿ ನಡೆದ 4 ನೇ ಸುತ್ತಿನ ಕೌನ್ಸಲಿಂಗನಲ್ಲಿ ಬಾಗಲಕೋಟೆ ತಾಲೂಕಿನ ವಿವಿಧ ಗ್ರಾಮಗಳಿಂದ ಪಾಲಕರು ಹಾಗೂ ಮಕ್ಕಳು ಆಗಮಿಸಿದ್ದರು. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ವೆಬ್‌ಸೈಟನಲ್ಲಿ ಆನ್‌ಲೈನ್ ಮೂಲಕ ನಡೆದ ಕೌನ್ಸಲಿಂಗನಲ್ಲಿ ಒಟ್ಟು 21 ಸ್ಥಾನಗಳಲ್ಲಿ ಖಾಲಿ ಇದ್ದ ಸೀಟುಗಳಲ್ಲಿ ವಿವಿಧ ಮೀಸಲಾತಿಯಿರುವ 19 ವಿದ್ಯಾರ್ಥಿಗಳನ್ನು ಭರ್ತಿ ಮಾಡಲಾಗಿದ್ದು, ವಿಕಲಚೇತನರಿಗೆ ಮಿಸಲಿಟ್ಟ ಎರಡು ಸ್ಥಾನಗಳು ಮಾತ್ರ ಖಾಲಿ ಉಳಿದಿರುತ್ತದೆ.
ಕೌನ್ಸಲಿಂಗನಲ್ಲಿ ಆದರ್ಶ ವಿದ್ಯಾಲಯದ ಪ್ರಾಚಾರ್ಯ ಬಿ.ವಿ.ಪಾಟೀಲ, ನೋಡಲ ಅಧಿಕಾರಿಯಾಗಿ ಆಗಮಿಸಿದ ಇಳಕಲ್ ಡಾಯಟ್ ಉಪನ್ಯಾಸಕಿ ಶ್ರೀಮತಿ ಆರ್.ಎಚ್.ಉಕಲಿ, ಬಾಗಲಕೋಟೆ ನಗರ ವಲಯದ ಶಿಕ್ಷಣ ಸಂಯೋಜಕ ಪಿ.ಬಿ. ಪಾಟೀಲ, ಪ್ರಥಮ ದರ್ಜೆ ಸಹಾಯಕರಾದ ವಿ.ಡಿ.ವಾಲಿಶೆಟ್ಟರ, ಶಿಕ್ಷಕರಾದ ಬಿ. ಬಿ. ದಾಸರ, ವಿ.ಎನ್. ಮಿಣಜ-ಗಿಯವರು ಯಶಸ್ವಿಯಾಗಿ ಕೌನ್ಸಲಿಂಗ ನಡೆಸಿದರು.

# ಒಳ ಮೀಸಲಾತಿ ವರದಿ ಪಕ್ಷಪಾತದಿಂದ ಕೂಡಿದೆ : ಅಪ್ಪಾಸಾಬ ಘಟಕಾಂಬಳೆ

**ಅಥಣಿ :** ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಒಳ ಮೀಸಲಾತಿ ಏಕ ಸದಸ್ಯ ವಿಚಾರಣಾ ಆಯೋಗವು ದಿ. 04/08/2025 ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಸೇರಿದ ಪರ್ಯೆಯ್ಯ ಪರವನ್ ಜಾತಿಯನ್ನು ಎಡಗೈ ಪಂಗಡಕ್ಕೆ ಸೇರಿಸಿರುವುದಲ್ಲವೇ ಸಮುದಾಯಕ್ಕೆ ಸೇರಿದ ಇನ್ನೂ ಹಲವು ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಿ ಬಲಗೈ ಸಮುದಾಯದ ಜನಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮಾಡಿರುವುದಲ್ಲದೇ ಜಾತಿಯೇ ಅಲ್ಲದ ಆದಿ ಕರ್ನಾಟಕ. ಆದಿ ದ್ರಾವಿಡ. ಆದಿ ಆಂದ. ಸಮೂಹಕ್ಕೆ ಶೇ 1 ರಷ್ಟು ಮೀಸಲಾತಿ ನಿಗಡಿಪಡಿಸಿರುವುದನ್ನು ರದ್ದು ಪಡಿಸಿ ಸದರಿ ಮೀಸಲಾತಿಯನ್ನು ಸಂಬಂಧಿಸಿದ ಜಾತಿಗಳಿಗೆ ಹಂಚಿಕೆ ಮಾಡಲು ಸಚಿವ ಸಂಪುಟ ಉಪ ಸಮಿತಿ ರಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಅಥಣಿ ತಾಲೂಕಾ ಘಟಕದ ಅಧ್ಯಕ್ಷ ಅಪ್ಪಾಸಾಬ ಘಟಕಾಂಬಳೆ ಇವರ ನೇತೃತ್ವದಲ್ಲಿ ಉಪ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.



ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಅಥಣಿ ತಾಲೂಕಾ ಘಟಕದ ಅಧ್ಯಕ್ಷ ಅಪ್ಪಾಸಾಬ ಘಟಕಾಂಬಳೆ ಮಾತನಾಡಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗಕ್ಕೆ, ಕರ್ನಾಟಕ ರಾಜ್ಯ ಛಲವಾದಿ ಮಹಾ ಸಭಾವು ಸಿದ್ದಯ್ಯ, ಐ.ಎ.ಎಸ್ (ನಿವೃತ್ತ) ರವರ ಅಧ್ಯಕ್ಷತೆಯಲ್ಲಿ ಹಲವಾರು ಮನವಿಗಳನ್ನು ಸಲ್ಲಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮವಹಿಸಲು ಕೋರಲಾಗಿತ್ತು.
ಆದರೂ ಏಕ ಪಕ್ಷಿಯವಾಗಿ ಒಂದು ಸಮುದಾಯವನ್ನು ಒಲೈಸಲು ಮತ್ತೊಂದು ಸಮುದಾಯಕ್ಕೆ ಅನ್ಯಾಯ ಮಾಡಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ರವರು ವರದಿ ಸಲ್ಲಿಸಿದ್ದು, ಸದರಿ ಒಳ ಮೀಸಲಾತಿ ವರದಿಯು ಅವೈಜ್ಞಾನಿಕ ಹಾಗೂ ಪಕ್ಷಪಾತದಿಂದ ಕೂಡಿರುತ್ತದೆ. ಆದರೆ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗವು ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಯಾವುದೇ ಸಂಘಟನೆಯ ಮನವಿಗಳನ್ನು ಪುರಸ್ಕರಿಸದ ಉದೇಶ ಪೂರ್ವಕವಾಗಿ ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡುವ ದುರುದ್ದೇಶದಿಂದ ಆಕ್ಷೇಪಣೆಗೆ ಅವಕಾಶ ಕಲ್ಪಿಸದೆ ಸರ್ಕಾರಕ್ಕೆ, ವರದಿ ಸಲ್ಲಿಸಿರುವುದು ಅಕ್ರಮ, ಅನ್ಯಾಯ, ಕಾನೂನು ಭಾಹಿರ ಕ್ರಮವಾಗಿರುತ್ತದೆ.
ನ್ಯಾಯಮೂರ್ತಿ ನಾಗಮೋಹನ್ ದಾಸ್ ರವರು ಸರ್ಕಾರಕ್ಕೆ ಸಲ್ಲಿಸಿರುವ ಏಕ ಪಕ್ಷಿಯವಾದ ಪಕ್ಷಪಾತದಿಂದ ಕೂಡಿರುವ ವರದಿಯನ್ನು ರಾಜ್ಯ ಸರ್ಕಾರವು ಯಥಾವತ್ತಾಗಿ ಒಪ್ಪಿಕೊಳ್ಳದೆ, ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿ ಒಳ ಮೀಸಲಾತಿ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ.
ಛಲವಾದಿ, ಬಲಗೈ, ಹೊಲೆಯ ಸಮುದಾಯವು ಸರ್ಕಾರವನ್ನು ಆಗ್ರಹಿಸುತ್ತದೆ ಎಂದರು.
ಈ ಸಂದರ್ಭದಲ್ಲಿ ಸಿದ್ದಾರ್ಥ್ ಸಿಂಗೆ. ಸಂಜು ಕಾಂಬಳೆ, ಮಹಾಂತೇಶ ಬಾಡಗಿ, ಮಂಜು ನೂಲಿ, ರಾಕೇಶ ಪಟ್ಟಣ, ಸಂಜೀವ ಕಾಂಬಳೆ. ಸುಕಮಾರ ಕಾಂಬಳೆ, ಮುರುಗೇಶ ಪಟ್ಟಣ, ವಿಜಯಕುಮಾರ ಬಡಚಿ, ಶಶಿ ನಿಡೋಣಿ, ಮಂಜು ಪಟ್ಟಣ, ಅಮೀತ ಕಾಂಬಳೆ, ಶಾಂತೇಶ ತೆರದಾಳ, ಅಪ್ಪು ಬೆಳ್ಳಂಕಿ, ಅಭಿಷೇಕ ಬನಸೊಡೆ, ಸಂದೀಪ್ ಘಟಕಾಂಬಳೆ, ಮಾರುತಿ ಘಟಕಾಂಬಳೆ, ಚಿದಾನಂದ ತಳಕೇರಿ. ಸುರೇಶ ಬೆಳ್ಳಂಕ್ಕಿ, ರಾಘವೇಂದ್ರ ಪಟ್ಟಣ, ರಾಘವೇಂದ್ರ ಪೊತಿ, ಸಚಿನ್ ಗಣಾಚಾರಿ, ಇನೂ ಹಲವರು ಮುಖಂಡರು ಉಪಸ್ಥಿತರಿದ್ದರು.

# ಗ್ರಂಥಾಲಯಗಳು ಹಾಗೂ ಗ್ರಂಥಪಾಲಕನ ಪಾತ್ರ ಅತೀ ಮಹತ್ವದ್ದು

**ಅಥಣಿ :** ಪ್ರತಿಯೊಬ್ಬರಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು, ಮನುಷ್ಯನ ವ್ಯಕ್ತಿತ್ವವನ್ನು ಬದಲಿಸಲು ಪುಸ್ತಕಗಳಿಂದ ಮಾತ್ರ ಸಾಧ್ಯ. ಪುಸ್ತಕದ ಮೌಲ್ಯ ಮತ್ತು ಸಾರ್ಥಕತೆ ಪಡೆಯಬೇಕಾದರೇ ಗ್ರಂಥಾಲಯಗಳು ಹಾಗೂ ಗ್ರಂಥಪಾಲಕನ ಪಾತ್ರ ಅತೀ ಮಹತ್ವದಾಗಿದೆ ಎಂದು ತಾಪಂ (ಪಂ.ರಾ) ಸಹಾಯಕ ನಿರ್ದೇಶಕ ಜಿ. ಎಸ್. ಮಠದ ಹೇಳಿದರು.
ಅವರು ಅಥಣಿ ಪಟ್ಟಣದ ತಾಪಂ ಸಭಾ ಭವನದಲ್ಲಿ ಹಮ್ಮಿಕೊಂಡ "ಗ್ರಂಥಪಾಲಕರ ದಿನಾಚರಣೆ"ಯ ನಿಮಿತ್ತವಾಗಿ ಗ್ರಂಥಾಲಯ ಪಿತಾಮಹ ಡಾ. ಎಸ್. ಆರ್. ರಂಗನಾಥನ ರವರ ಬಾವಚಿತ್ರ ಪೂಜೆ ಸಲ್ಲಿಸಿ ಮಾತನಾಡಿ, ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಬೆಳೆಯುವುದಕ್ಕೆ ಡಾ. ಎಸ್. ಆರ್. ರಂಗನಾಥನರು ಪ್ರಮುಖ ಕಾರಣರು. ಗ್ರಂಥಾಲಯ ಸೇವೆಯಲ್ಲಿರುವವರಿಗೆ ರಂಗನಾಥನರವರ ಸಂದೇಶಗಳು ಮಾರ್ಗದರ್ಶಕವಾಗಿ ನೆಲೆ




ನಿಮತಿವೆ. ಅವರು ನೀಡಿದ ಗ್ರಂಥಾಲಯ ಪಂಚ ಸೂತ್ರಗಳು ಜಗತ್ತಿನಲ್ಲಿ ಪ್ರಸಿದ್ದಿ ಪಡೆದಿವೆ. ಡಾ. ಎಸ್. ಆರ್. ರಂಗನಾಥ ಅವರಷ್ಟು ಗ್ರಂಥಾಲಯದಲ್ಲಿ ಪರಿನೀತಿ ಪಡೆದವರು ಮತ್ತೊಬ್ಬರಿಲ್ಲ. ಗ್ರಂಥಾಲಯ ವಿಜ್ಞಾನವನ್ನು ಭಾರತದಾಧ್ಯಂತ ಬೆಳೆಸುವಲಿ, ಪ್ರಚಾರ ಮಾಡುವಲ್ಲಿ ಅವರೇ ಮೊದಲಿಗರು. ಆದ್ದರಿಂದ ಅವರನ್ನು ಭಾರತದ ಗ್ರಂಥಾಲಯ ವಿಜ್ಞಾನದ ಪಿತಾಮಹ್ ಎಂದು ಕರೆಯಲಾಗಿದೆ ಎಂದರು.
ತಾಪಂ ಅಧೀಕ್ಷಕ ಜಿ. ಎಮ್. ಸ್ವಾಮಿ ಮಾತನಾಡಿ, ಪ್ರತಿಯೊಂದು ಜೀವಿಗೂ ಬದುಕಲು ನೀರು, ಗಾಳಿ, ಬೆಳಕು, ಆಹಾರ ಹೇಗೆ ಮುಖ್ಯವೋ ಹಾಗೇಯೇ ಮನುಷ್ಯ ಮನುಷ್ಯತ್ವದಿಂದ ನಡೆದುಕೊಳ್ಳಲು ಪುಸ್ತಕಗಳು ಅವಶ್ಯ. ಆದ್ದರಿಂದ ಪ್ರತಿಯೊಬ್ಬರು ಗ್ರಂಥಾಲಯದಲ್ಲಿರುವ ಪುಸ್ತಕಗಳಿಂದ ಜ್ಞಾನ ಪಡೆದುಕೊಳ್ಳಬೇಕು ಎಂದರು.
ಈ ವೇಳೆ ತಾಪಂ ವ್ಯವಸ್ಥಾಪಕ ಜಿ. ಎಮ್. ಸ್ವಾಮಿ, ವಿಷಯ ನಿರ್ವಾಹಕ ಎಸ್. ಎನ್. ಹಿರೇಮಠ, ಕೆ. ಎಂ. ಮಾಯಣ್ಣವರ, ಸ್ವಪ್ನಾ ಜಂಬಗಿ, ಮಿನಾಕ್ಷಿ ಬನಹಟ್ಟಿ,
ಸಂಜು ಕಾಂಬಳೆ, ಜೆ. ಎಚ್. ಪಟೇಲ್. ಜೆ. ಖ. ಪವಾರ, ಟಿ. ಎನ್. ಕೋಳಿ, ಸತೀಶ ಬಸಗೌಡರ, ತಾಲೂಕಾ ಗ್ರಂಥಾಲಯ ಮೇಲ್ವಿಚಾರಕ ಸಂಘದ ಅಧ್ಯಕ್ಷ ಕಲ್ಮೇಶ ಸತ್ತಿ, ಉಪಾಧ್ಯಕ್ಷ ಜ್ಯೋತಿಭಾ ಸಿಂದೆ, ಕಾರ್ಯದರ್ಶಿ ಅಶೋಕ ಕೋಳಿ, ಖಂಜಾಂಚಿ ಶೀತಲ ನೇಮಗೌಡ ಹಾಗೂ ತಾಲೂಕಿನ ಎಲ್ಲ ಗ್ರಂಥಾಲಯ ಮೇಲ್ವಿಚಾರಕರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಲೋಕ ಕಲ್ಯಾಣಕ್ಕಾಗಿ ನಿರಾಣಿ ಕುಟುಂಬದಿಂದ ಕೃಷ್ಣಾ ಪುಣ್ಯಸ್ನಾನ-ಹೋಮ



**ಜಮಖಂಡಿ :** ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಶನಿವಾರ ಎಂ.ಆರ್.ಎನ್. ಫೌಂಡೇಶನ್ ಮತ್ತು ರೈತ ಸೇವಾ ಸಮೀತಿ ಹಮ್ಮಿಕೊಂಡಿದ್ದ ಕುಂಭಮೇಳ, ಕೃಷ್ಣಾರತಿ, ಕೃಷ್ಣ ಪುಣ್ಯಸ್ನಾನ ಜೊತೆಗೆ ಎಲ್ಲರ ಗಮನ ಸೆಳೆದಿದ್ದು, ಲೋಕ ಕಲ್ಯಾಣಕ್ಕಾಗಿ ವಿಶೇಷ ಪೂಜೆ ಮತ್ತು ಹೋಮ ಹವನದ ಪೂಜಾ ವಿಧಿ ವಿಧಾನಗಳು ಜರುಗಿದವು.
ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಶನಿವಾರ ಅಕ್ಷರಷಃಹಬ್ಬದವಾತಾವರಣಸೃಷ್ಟಿಯಾಗಿ-ತ್ತು. ಎಲ್ಲಿ ನೋಡಿದರೂ ಸಂಭ್ರಮವೇ ಸಂಭ್ರಮ. ನಾಗಾಸಾಧುಗಳ, ಅಘೋರಿ ಸಾಧುಗಳ ದರ್ಶನ ಮತ್ತು ಲೋಕ ಕಲ್ಯಾಣ-ಕ್ಕಾಗಿ ಹಮ್ಮಿಕೊಂಡಿದ್ದ ಹೋಮ ವೀಕ್ಷಣೆಗಾಗಿ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಹೆಚ್ಚು ಉತ್ಸುಕರಾಗಿದ್ದರು.
ಲೋಕ ಕಲ್ಯಾಣ ಮತ್ತು ಈ ಭಾಗದ ಜನರ ಸಮೃದ್ಧಿಪ್ರಾಪ್ತಿಗಾಗಿ ನಿರಾಣಿಕುಟುಂಬದವರು ವಿಶೇಷ ಪೂಜೆ ಸಹಿತ ಹೋಮಹವನ ನಡೆಸಿದರು. ನಾಗಾಸಾಧುಗಳ ಮತ್ತು ಶ್ರೀಗಳ ನೇತೃತ್ವದಲ್ಲಿ ನಿರಾಣಿ ಕುಟುಂಬದವರು ವಿಶೇಷ ಪೂಜೆ ಮತ್ತು ಹೋಮವನ್ನು ಪೂಜೆಗಾಗಿ ಕೃಷ್ಣಾನದಿಗೆ ಇಳಿದು ಪುಣ್ಯಸ್ನಾನ ಮಾಡಿಕೊಂಡು ನಂತರ ಮಂತ್ರಗಳ ಘೋಷದೊಂದಿಗೆ ಪೂಜಾ ವಿಧಿ ವಿಧಾನಗಳಲ್ಲಿ ಪೂರೈಸಿದರು.
ಲೋಕ ಕಲ್ಯಾಣಕ್ಕಾಗಿ ಹಿಪ್ಪರಗಿಯಲ್ಲಿ ನಡೆದ ವಿಶೇಷ ಪೂಜೆ ಮತ್ತು ಹೋಮದಲ್ಲಿ ಮಾಜಿ ಸಚಿವ ಮುರಗೇಶ ನಿರಾಣಿ, ಅವರ ಧರ್ಮಪತ್ನಿ ಕಮಲಾ, ಲಕ್ಷ್ಮಣ ನಿರಾಣಿ, ಅವರ ಧರ್ಮಪತ್ನಿ ಜ್ಯೋತಿ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಅವರ ಧರ್ಮಪತ್ನಿ ಶೋಭಾ ಮತ್ತು ಎಂ.ಆರ್.ಎನ್. ಸಮೂಹ ಸಂಸ್ಥೆಗಳ ನಿರ್ದೇಶಕ ಸಂಗಮೇಶ ನಿರಾಣಿ, ಹಾಗೂ ಅವರ ಧರ್ಮಪತ್ನಿ ದ್ರಾಕ್ಷಾಯಣಿ ದಂಪತಿ ಸಮೇತರಾಗಿ ಪೂಜಾ ವಿಧಾನಗಳಲ್ಲಿ ಪಾಲ್ಗೊಂಡಿದ್ದರು.
ಶನಿವಾರ ಹಿಪ್ಪರಗಿಯಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು,
ಅಭಿಮಾನಿಗಳು ಪಾಲ್ಗೊಳ್ಳುವ ಮೂಲಕ ಕುಂಭಮೇಳ, ಕೃಷ್ಣಾರತಿ,
ಕೃಷ್ಣಾ ಪುಣ್ಯಸ್ನಾನ ಜೊತೆಗೆ ಲೋಕ ಕಲ್ಯಾಣಕ್ಕಾಗಿ ವಿಶೇಷ ಪೂಜೆ ಮತ್ತು ಹೋಮ ಇತರೆ ಧಾರ್ಮಿಕ ಕಾರ್ಯಕ್ರಮದ ಯಶಸ್ವಿಗೆ ಸಾಕ್ಷಿಯಾದರು.

# ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಾಸಕಿ ಕನೀಜ್ ಫಾತಿಮಾ ಒತ್ತಾಯ



**ಬೆಂಗಳೂರು :** ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ ಮತ್ತು ಕೆಪಿಸಿಸಿ ಸದಸ್ಯ ಫರಾಜ್ ಉಲ್ ಇಸ್ಲಾಂ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಭೇಟಿ ಮಾಡಿ, ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಿಕೊಂಡು ಮಾಡಿರುವ ಅವಹೇಳನಕಾರಿ ಹೇಳಿಕೆಗಳ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು.
ಈ ಸಂದರ್ಭದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗೆ ಕಾಂಗ್ರೆಸ್ ನಾಯಕರು ತೀವ್ರ ಕಳವಳ ವ್ಯಕ್ತಪಡಿಸಿದರು, ಇಂತಹ ಹೇಳಿಕೆಗಳು ಅತ್ಯಂತ ಆಕ್ಷೇಪಾರ್ಹ, ತಾರತಮ್ಯ ಮತ್ತು ಮಹಿಳೆಯರ ಘನತೆಗೆ ಮತ್ತು ರಾಜ್ಯದ ಸಾಮಾಜಿಕ ಸಾಮರಸ್ಯಕ್ಕೆ ತೀವ್ರ ನೋವುಂಟುಮಾಡುತ್ತವೆ ಎಂದು ಹೇಳಿದರು. ಮುಖ್ಯಮಂತ್ರಿ ಮತ್ತು ಸ್ಪೀಕರ್ ಅವರು ಯತ್ನಾಳ್ ವಿರುದ್ಧ ಕಠಿಣ ಮತ್ತು ಅನುಕರಣೀಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು, ಅನಿಯಂತ್ರಿತ ದ್ವೇಷ ಭಾಷಣವು ಸಾಂವಿಧಾನಿಕ ಮೌಲ್ಯಗಳು ಮತ್ತು ಕೋಮು ಏಕತೆಯನ್ನು ಹಾಳು ಮಾಡುತ್ತದೆ ಎಂದು ಒತ್ತಿ ಹೇಳಿದರು.
ನಂತರ ಮಾತನಾಡಿದ ಶಾಸಕಿ ಕನೀಜ್ ಫಾತಿಮಾ, ಧರ್ಮ ಅಥವಾ ಸಮುದಾಯವನ್ನು ಲೆಕ್ಕಿಸದೆ ಮಹಿಳೆಯರ ಗೌರವವನ್ನು ಕಾಪಾಡುವುದು ತತ್ವ ಮತ್ತು ನ್ಯಾಯದ ವಿಷಯವಾಗಿದೆ ಎಂದು ಹೇಳಿದರು. ಕರ್ನಾಟಕದ ಪ್ರಜಾಪ್ರಭುತ್ವ ಚೌಕಟ್ಟಿನಲ್ಲಿ ವಿಭಜಕ ಮತ್ತು ತಾರತಮ್ಯದ ವಾಕ್ಚಾತುರ್ಯಕ್ಕೆ ಯಾವುದೇ ಸ್ಥಾನವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಬಲವಾದ ಕ್ರಮವು ರವಾನಿಸುತ್ತದೆ ಎಂದು ಫರಾಜ್ ಉಲ್ ಇಸ್ಲಾಂ ಹೇಳಿದರು.
ಸಮಾನತೆ, ಗೌರವ ಮತ್ತು ಕೋಮು ಸೌಹಾರ್ದತೆಯ ತತ್ವಗಳನ್ನು ಎತ್ತಿ ಹಿಡಿಯುವುದು ಸರ್ಕಾರ ಮತ್ತು ವಿಧಾನಸಭೆಯ ಕರ್ತವ್ಯವಾಗಿದ್ದು, ಈ ವಿಷಯದಲ್ಲಿ ತಕ್ಷಣದ ಹಸ್ತಕ್ಷೇಪಕ್ಕೆ ಮನವಿ ಮಾಡಿದರು.

# ಸಪ್ಟೆಂಬರ್ 16 ರಿಂದ ಬನಹಟ್ಟಿಯ ಕಾಡಸಿದ್ಧೇಶ್ವರ ಜಾತ್ರೆ

**ಬನಹಟ್ಟಿ :** ಇಲ್ಲಿನ ಕಾಡಸಿದ್ಧೇಶ್ವರ ಜಾತ್ರೆಯನ್ನು ಸಪ್ಟೆಂಬರ್ 16 ರಿಂದ ಆಚರಿಸಲಾಗುವುದು ಎಂದು ಮಂಗಳವಾರ ಪೇಟೆ ಹಟಗಾರ ದೈವ ಮಂಡಳಿಯ ಅಧ್ಯಕ್ಷ ಶ್ರೀಶೈಲ ಧಬಾಡಿ ತಿಳಿಸಿದರು.
ಅವರು ಗುರುವಾರ ಇಲ್ಲಿನ ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ಕಾಡಸಿದ್ಧೇಶ್ವರ ಜಾತ್ರೆಯ ದಿನಾಂಕ ನಿರ್ಧರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.
ಸಪ್ಟೆಂಬರ 14 ರಿಂದ 18 ರವರೆಗೆ ಐದು ದಿನಗಳ ಕಾಲ ಜಾತ್ರೆಯನ್ನು ಆಚರಿಸಲಾಗುವುದು.
16 ರಂದು ಸಂಜೆ ರಥೋತ್ಸವ, 17 ರಂದು ಅಂತರರಾಷ್ಟ್ರೀಯ ಮಟ್ಟದ ಜಂಗಿ ನಿಕಾಲಿ ಕುಸ್ತಿಗಳು, 18 ರಂದು ಕಳಸೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಧಬಾಡಿ ತಿಳಿಸಿದರು.
ನಗರದ ಪ್ರಮುಖರು ಸಾಮೂಹಿಕ ಮಂಗಳಾರುತಿಯನ್ನು ನೆರವೇರಿಸಿದರು. ನಂತರ ದೇವಸ್ಥಾನದಲ್ಲಿ ಗೋವಿನ ಜೋಳದ ನುಚ್ಚು ಮತ್ತು ಅಂಬಲಿ ಪ್ರಸಾದವನ್ನು ನೀಡಲಾಯಿತು.
ಈ ಸಂದರ್ಭದಲ್ಲಿ ಶಾಂತವೀರಯ್ಯ ಹಿರೇಮಠ, ಶ್ರೀಶೈಲ ಮಠಪತಿ, ಸಿದ್ಧನಗೌಡ ಪಾಟೀಲ, ಶ್ರೀಪಾದ ಬಾಣ-ಕಾರ, ಮಲ್ಲಿಕಾರ್ಜುನ ತುಂಗಳ, ದಾನಪ್ಪ ಹುಲಜತ್ತಿ, ಎಂ. ಜಿ. ಕೆರೂರ, ಪ್ರಶಾಂತ ಕೊಳಕಿ, ಬಸವರಾಜ ಜಾಡಗೌಡ, ಪ್ರಕಾಶ ಮಂಡಿ, ರಾಜೇಂದ್ರ ಭದ್ರನವರ, ಪಂಡಿತ ಪಟ್ಟಣ, ಶಿವಾನಂದ ಕುಳ್ಳಿ, ದೇವಸ್ಥಾನದ ಅರ್ಚಕರಾದ ದುಂಡಯ್ಯ ಕಾಡದೇವರ, ಶಂಕ್ರಯ್ಯ ಕಾಡದೇವರ, ನಿಜಗುಣಯ್ಯ ಕಾಡದೇವರ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.



# ಮನೆ ಬೀಗ ಮುರಿದು 1.15 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು




**ಕಲಬುರಗಿ :** ಮನೆ ಬೀಗ ಮುರಿದು 1.15 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿರುವ ಘಟನೆ ಪಂಚಶೀಲ ನಗರದಲ್ಲಿ ನಡೆದಿದೆ.
ಲಕ್ಷ್ಮೀಕಾಂತ ಹಡಗಿಲ್ ಎಂಬುವವರ ಮನೆ ಬೀಗ ಮುರಿದು ಕಳ್ಳರು 20 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ತಾಳಿ, 40 ಸಾವಿರ ರೂ.ಮೌಲ್ಯದ ತಲಾ 5 ಗ್ರಾಂ.ಬಂಗಾರದ 2 ಸುತ್ತುಂಗುರ, 10 ಸಾವಿರ ರೂ.ಮೌಲ್ಯದ 2.5 ಗ್ರಾಂ.ಬಂಗಾರದ ಸುತ್ತುಂಗುರ, 8 ಸಾವಿರ ರೂ.ಮೌಲ್ಯದ 2 ಗ್ರಾಂ.ಬಂಗಾರದ ಕಿವಿಯೋಲೆ, 2 ಸಾವಿರ ರೂ.ಮೌಲ್ಯದ 20 ಗ್ರಾಂ.ಬೆಳ್ಳಿಯ ಉಡದಾರ, 5 ಸಾವಿರ ರೂ.ಮೌಲ್ಯದ 50 ಗ್ರಾಂ.ಬೆಳ್ಳಿಯ ಖಡೆ, 10 ಸಾವಿರ ರೂ.ಮೌಲ್ಯದ 100 ಗ್ರಾಂ.ಬೆಳ್ಳಿಯ ಕಾಲು ಚೈನಾ ಹಾಗೂ 20 ಸಾವಿರ ರೂ.ನಗದು ಸೇರಿ 115000 ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿದ್ದಾರೆ.
ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618